www.divinegen.org

ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 7 ಸಂಚಿಕೆ -3 ಫೆಬ್ರವರಿ 2012
Volume : VII Issue : III February 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ವಯಸ್ಕರ ಸ್ವರ
3. ಕಾಫಿ ರಾಗ
4. ಅರಮನೆಯ ಕೆಲಸದವನಾಗಿದ್ದ ಪೇತ್ರನಿಗಾದ ಹಿಂಸೆ
5. ಸಮಾರ್ಯ ಸ್ತ್ರೀಗೆ ಯೇಸು ಸಾಕ್ಷಿ ಹೇಳಿದನು
6. ತಿಳುವಳಿಕೆಯ ಸ್ವರ
7. ಅನಾಥರ ಸ್ವರ
8. ಪ್ರಶ್ನೋತ್ತರಗಳ ಸ್ವರ
9. ದೇವದರ್ಶನ ಗುಡಾರವೂ ಅಂಗಳವೂ
10. ಆರೋಗ್ಯ ಸ್ವರ
11 ಪ್ರಾರ್ಥನಾ ಸ್ವರ
12. ಸ್ಥಳೀಯ ಮತ್ತು ವಿದೇಶ ಸುದ್ಧಿ
13. ಮಕ್ಕಳ ಸ್ವರ
14 ಕವನ
15. ಸಂತೋಷವುಳ್ಳ ಕುಟುಂಬ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಯರಿಗೆ ನನ್ನ ಆತ್ಮೀಯ ವಂದನೆಗಳು. ಹೊಸ ವರ್ಷದ ಒಂದು ತಿಂಗಳು ಕಳೆದು ಎರಡನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ಅನೇಕರು ಹಳೆಯ ಪಾಪದ ಕಹಿ ನೆನಪುಗಳನ್ನು ಮರೆತಿದ್ದಾರೆ, ಇನ್ನು ಅನೇಕರು ಹಳೆಯ ವರ್ಷದ ಸಿಹಿ ನೆನಪುಗಳನ್ನು ಮೆಲುಕು ಹಾಕುತ್ತಾ ಸಾಗುತ್ತಿದ್ದಾರೆ. ಆದರೆ ಕರ್ತನು ಈ ಹೊಸ ವರ್ಷ ಹೊಸ ಕಾರ್ಯಗಳನ್ನು ತನ್ನನ್ನು ನಂಬಿದ ತನ್ನ ಜನರಿಗಾಗಿ ಮಾಡಲು ಶಕ್ತನಾಗಿದ್ದಾನೆ. **"ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ"** (ಯೋಹಾ. 11:40–41). ಎಂದು ಅಂದು ಕರ್ತನಾದ ಯೇಸು ಕ್ರಿಸ್ತನು ಮಾರ್ಥ ಮರಿಯಳಿಗೆ ಹೇಳಿದಂತೆ ನಿಮ್ಮೆಲ್ಲರನ್ನು ನೋಡಿ ಹೇಳುತ್ತಿದ್ದಾನೆ. ಕರ್ತನ ಅದ್ಭುತ ಕೃಪೆಯಿಂದಲೂ ನಿಮ್ಮೆಲ್ಲರ ಪ್ರಾರ್ಥನೆ ಪ್ರೋತ್ಸಾಹ ಸಹಕಾರದಿಂದಲೂ ಡಿಜಿಎಮ್ ಬೇತೇಲ್ ಸಭೆಯ ಎಲ್ಲಾ ದೇವಜನರು ಹಾಗೂ ಸಿಬ್ಬಂದಿಯವರಿಂದಲೂ ದೇವರ ಸ್ವರ ಮಾಸ ಪತ್ರಿಕೆಯು ಸಾಗುತ್ತಿದೆ. ನಾನು ಎಲ್ಲಾ ವಾಚಕ ಸಹೋದರ ಸಹೋದರಿಯರಿಗೆ ವಿನಂತಿಸಿಕೊಳ್ಳುವುದೇನೆಂದರೆ ಈ ಮಾಸಿಕ ಪತ್ರಿಕೆಯನ್ನು ನಿಮ್ಮ ಸ್ನೇಹಿತರಿಗೂ, ಸಭಿಕರಿಗೂ, ಸಂಬಂಧಿಕರಿಗೂ ಪರಿಚಯಿಸಿರಿ. ಈ ಮೂಲಕ ದೇವರ ವಾಕ್ಯವು ಅನೇಕ ಜನರ ಬಳಿಗೆ ಹೋಗಲು ನೀವು ಸಹಾಯ ಮಾಡಿದಂತಾಗುತ್ತದೆ ಮತ್ತು ಈ ಸೇವೆಗೆ ಪರಲೋಕದಿಂದ ಬರುವ ಪ್ರತಿಫಲಕ್ಕೆ ನೀವೂ ಸಹ ಬಾಧ್ಯರಾಗುವಿರಿ. ಕರ್ತನ ಅಪಾರ ಕೃಪೆ ನಿಮ್ಮೆಲ್ಲರೊಂದಿಗೂ ಯಾವಾಗಲೂ ಇರಲಿ ಎಂದು ಹಾರೈಸುತ್ತಾ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಾನು ಮೊದಲೇ ಹೇಳಿದಂತೆ ಸತ್ಯವೇದದ ಆಧಾರದಲ್ಲಿ 3 ವಿಧವಾದ ಮದಲಗಿತ್ತಿಯರನ್ನು ತಿಳಿದುಕೊಳ್ಳುತ್ತೇವೆ.

1. ಇಸ್ರಾಯೇಲ್ ಜನಾಂಗ ಯೆಹೋವನ ಮದಲಗಿತ್ತಿ (ಯೆಶಾ. 54:5–6).
2. ಹೊಸ ಒಡಂಬಡಿಕೆಯ ಸಭೆ ಕ್ರಿಸ್ತನ ಮದಲಗಿತ್ತಿ (ಯೋಹಾ. 3:29, 2 ಕೊರಿ. 11:2).
3. ಬಾಬೆಲೆಂಬ ಮಹಾನಗರಿ ಕ್ರಿಸ್ತ ವಿರೋಧಿಯ ಮದಲಗಿತ್ತಿ (ಪ್ರಕ. 17:5).

ಹಳೆ ಒಡಂಬಡಿಕೆಯ ಇಸ್ರಾಯೇಲ್ ಜನಾಂಗಕ್ಕೂ ಹೊಸ ಒಡಂಬಡಿಕೆಯ ಕ್ರಿಸ್ತನ ಸಭೆಗೂ ನೇರವಾದ ಯಾವುದೇ ಸಂಬಂಧವಿಲ್ಲ. ಸತ್ಯವೇದದ ಅಧ್ಯಾಯನದಿಂದ ಈ ಲೋಕದಲ್ಲಿ ಇರುವ ಮೂರು ಗುಂಪುಗಳ ಬಗ್ಗೆ ತಿಳಿದುಕೊಳ್ಳಬಹುದು.

1. ಯೆಹೂದ್ಯ ಜನಾಂಗ (ಇಸ್ರಾಯೇಲರು)
2. ಹೊಸ ಒಡಂಬಡಿಕೆಯ ಕ್ರಿಸ್ತನ ಸಭೆ
3. ಅನ್ಯ ಜನಾಂಗ.

ಯೇಸುಕ್ರಿಸ್ತನ ರಹಸ್ಯ ಬರೋಣದಲ್ಲಿ ಎತ್ತಲ್ಪಡುವಂತದ್ದು ಮೇಲೆ ಹೇಳಿದ ಎರಡು ಜನಾಂಗಗಳನ್ನು ಬಿಟ್ಟು ಸಿದ್ಧವಾದ ಯೇಸುಕ್ರಿಸ್ತನ ಸಭೆಯಾಗಿದೆ. ಯಾಕಂದರೆ ಯೆಹೋವನ ಹಾದರದ ಪತ್ನಿಯಾದ ಇಸ್ರಾಯೇಲಿಗೂ ಕ್ರಿಸ್ತನ ಶುದ್ಧ ಕನ್ಯೆಯಾದ ಮದಲಗಿತ್ತಿಯಾದ ಹೊಸ ಒಡಂಬಡಿಕೆಯ ಸಭೆಗೂ ನಡುವೆ ಅಜಾಗಜಾಂತರವಾದ ವ್ಯತ್ಯಾಸವಿದೆ.

ಪ್ರಕ. 19:9 ರಲ್ಲಿ ಇದಲ್ಲದೆ ಆತನು ನನ್ನ ಸಂಗಡ ಮಾತನಾಡುತ್ತಾ ಯಜ್ಞದ ಕುರಿಯಾದಾತನ ವಿವಾಹಕ್ಕೆ ಕರೆಸಿಕೊಂಡವರು ಧನ್ಯರು ಎಂಬುದಾಗಿ ಬರೆ ಎಂದು ನನಗೆ ಹೇಳಿ ಈ ಮಾತುಗಳು ದೇವರ ಸತ್ಯವಚನಗಳಾಗಿವೆ ಅಂದನು. ಏಳನೆಯ ವಚನದಲ್ಲಿ ಯಜ್ಞದ ಕುರಿಯಾದಾತನ ವಿವಾಹದ ಕುರಿತು ವಿವರಿಸಿ ಒಂಬತ್ತನೆಯ ವಾಕ್ಯದಲ್ಲಿ ವಿವಾಹನಂತರ ನಡೆಯಲಿರುವ ಔತಣಕೂಟದ ಬಗ್ಗೆ ವಿವರಿಸಲಾಗಿದೆ. ಇಲ್ಲಿ ಕರೆಯಲ್ಪಟ್ಟವರು ವಿವಾಹಕ್ಕಲ್ಲ, ವಿವಾಹದ ಔತಣ ಕೂಟಕ್ಕಾಗಿದೆ. ಹಾಗಿದ್ದರೂ ಅವರನ್ನು ಧನ್ಯರು ಎಂದು ಪರಿಗಣಿಸಲಾಗುತ್ತಿದೆ ಇದರಿಂದಾಗಿ ಕ್ರಿಸ್ತನ ಹೊಸ ಒಡಂಬಡಿಕೆಯ ಸಭೆ ಮಾತ್ರ ಮದಲಗಿತ್ತಿಯಾಗಿದೆ ಎಂದು ತಿಳಿದುಕೊಳ್ಳಬಹುದು. ಸಭೆ ವಿವಾಹಕ್ಕೆ ಕರೆಯಲ್ಪಟ್ಟವಳಲ್ಲ, ಅವಳನ್ನು ಅವಳ ಮದುವೆಗೆ ಕರೆಯಬೇಕಾದ ಅವಶ್ಯಕತೆಯಿಲ್ಲ. ಹಾಗಿದ್ದರೆ ಇಲ್ಲಿ ಕರೆಯಲ್ಪಟ್ಟವರು ಯಾರು?

ಧರ್ಮಶಾಸ್ತ್ರ ಯುಗದ ಕೊನೆಯ ಪ್ರವಾದಿಯಾದ ಸ್ನಾನಿಕ ಯೋಹಾನನು ಮದಲಿಂಗನ ಸ್ನೇಹಿತನೆಂದು ಹೇಳಿರುವುದು ತಾನೊಳಗೊಂಡ ಹಳೆ ಒಡಂಬಡಿಕೆಯ ಭಕ್ತರ ಕುರಿತಾಗಿದೆ. ಯೋಹಾ. 3:29 ಅಂದರೆ ಸ್ನಾನಿಕನಾದ ಯೋಹಾನನ ತನಕ ಮಾತ್ರವೇ ಧರ್ಮಶಾಸ್ತ್ರ ಯುಗ ಅಥವಾ ಹಳೆಯ ಒಡಂಬಡಿಕೆಯಿತು. ಸ್ನಾನಿಕ ಯೋಹಾನನ ಮಾತಿನಂತೆ ಮದಲಿಂಗನ ಸ್ನೇಹಿತರು ಹಳೆ ಒಡಂಬಡಿಕೆಯ ಭಕ್ತರಾಗಿರುವುದರಿಂದ ಇವರೇ ಮದುವೆಗೆ ಕರೆಯಲ್ಪಟ್ಟವರು ಯಾಕಂದರೆ ಕರ್ತನಾದ ಯೇಸುಕ್ರಿಸ್ತನು ಇದರ ಕುರಿತು ಹೀಗೆ ಹೇಳಿದನು **"ಇದಲ್ಲದೆ ನಿಮಗೆ ಹೇಳುವದೇನಂದರೆ ಮೂಡಣ ಪಡುವಣ ದಿಕ್ಕುಗಳಿಂದ ಬಹಳ ಜನ ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ ಇಸಾಕ ಯಾಕೋಬ ಎಂಬವರ ಸಂಗಡ ಊಟಕ್ಕೆ ಕೂಡ್ರುವರು"** (ಮತ್ತಾ. 8:11).

ಇದರಿಂದಾಗಿ ಮದಲಿಂಗನಾದ ಯೇಸುಕ್ರಿಸ್ತನೊಂದಿಗೆ ಮದಲಗಿತ್ತಿಯಾದ ಹೊಸ ಒಡಂಬಡಿಕೆಯ ಸಭೆಯ ವಿವಾಹವು

1 ಥೆಸ. 4:13–18 ರಲ್ಲಿ ಸಭೆ ಎತ್ತಲ್ಪಟ್ಟ ನಂತರ ಮಧ್ಯಾಕಾಶದಲ್ಲಿ (ಪರಲೋಕದಲ್ಲಿ) ನಡೆಯುತ್ತದೆ. 7 ವರ್ಷಗಳ ನಂತರ ಸಭೆ ವಿವಾಹ ಮುಗಿಸಿಕೊಂಡು ವಿವಾಹದ ಔತಣ ಕೂಟ ನಡೆಸಲು ಕ್ರಿಸ್ತನೊಂದಿಗೆ ಈ ಲೋಕಕ್ಕೆ ಆಗಮಿಸುತ್ತದೆ. ಅಲ್ಲಿ ಕೆಲವು ಕಾರ್ಯಗಳು ಭೂಮಿಯಲ್ಲಿ ನಡೆದ ನಂತರ ಸಾವಿರ ವರ್ಷದ ಆಳ್ವಿಕೆ (ಮಿಲ್ಲೆನಿಯಮ) ಆರಂಭವಾಗುತ್ತದೆ. ಇದೇ ಮದಲಿಂಗನಾದ ಯೇಸುಕ್ರಿಸ್ತನ ಹಾಗೂ ಮದಲಗಿತ್ತಿಯಾದ ಹೊಸ ಒಡಂಬಡಿಕೆ ಸಭೆಯ ವಿವಾಹದ ಔತಣ ಕೂಟ.

ಎಸ್ತೇರಳ ಪುಸ್ತಕದಲ್ಲಿ ಅರಸನಾದ ಅಹಷ್ವೇರೋಷನು ನೂರೆಂಬತ್ತು ದಿನ (ಆರು ತಿಂಗಳು) ಔತಣ ಕೂಟ ನಡೆಸಿದ್ದಾಗಿ ಓದುತ್ತೇವೆ ಎಸ್ತೇ. 1:4 ಸಾಮಾನ್ಯವಾಗಿ ಯೆಹೂದ್ಯರು ತಮ್ಮ ಮದುವೆಗೆ ಒಂದು ವಾರದ ತನಕ ಔತಣ ಕೂಟಗಳನ್ನು ಏರ್ಪಡಿಸುತ್ತಾರೆ. ಆದರೆ ಯಜ್ಞದ ಕುರಿಯಾದಾತನ ವಿವಾಹದ ಔತಣ ಕೂಟ ಎಷ್ಟು ದಿನಗಳವರೆಗೆ ಮುಂದುವರಿಯುವುದು ಎಂದು ಸತ್ಯವೇದ ತಿಳಿಸುತ್ತಿಲ್ಲ. ವಿವಾಹದ ನಂತರ ಮದಲಿಂಗನಾದ ಕ್ರಿಸ್ತನು ತನ್ನ ಮದಲಗಿತ್ತಿಯಾದ ಸಭೆಯೊಂದಿಗೆ ಸಾವಿರ ವರ್ಷದ ಆಳ್ವಿಕೆಗೆ ಈ ಭೂಮಿಗೆ ಆಗಮಿಸುತ್ತಾನೆ ಆದ್ದರಿಂದ ಔತಣ ಕೂಟ ಈ ಭೂಮಿಯಲ್ಲೇ ಇರುತ್ತದೆ.

ಪ್ರಕ. 19:1–10 ರಲ್ಲಿ ಸಭೆ ಪರಲೋಕದಲ್ಲಿದೆ.

ಪ್ರಕ. 19:11–16 ರಲ್ಲಿ ಸಭೆಯೊಂದಿಗೆ ಕ್ರಿಸ್ತನು ಏಳು ವರ್ಷಗಳ ನಂತರ ಭೂಮಿಗೆ ರಾಜಾಧಿರಾಜನಾಗಿ ಆಗಮಿಸುತ್ತಾನೆ.

ನಾನು ನಿತ್ಯಶ್ರೇಷ್ಠತೆಯನ್ನು ದಯಪಾಲಿಸಿ ನಿನ್ನನ್ನು ತಲತಲಾಂತರಗಳವರಿಗೆ ಉಲ್ಲಾಸಕರವಾಗುವಂತೆ ಮಾಡುವೆನು (ಯೆಶಾ. 60::15).

ಪ್ರಕ. 19:17–21 ರಲ್ಲಿ ಅರ್ಮಗೆದ್ದೋನ್ ಯುದ್ಧದಲ್ಲಿ ಕ್ರಿಸ್ತ ವಿರೋಧಿ ಹಾಗೂ ಸುಳ್ಳು ಪ್ರವಾದಿ ಜೀವಂತನಾಗಿ ಸಿಕ್ಕಿದಾಗ ಬೆಂಕಿ ಗಂಧಕಗಳ ಕೆರೆಗೆ ದೊಬ್ಬಲ್ಪಡುವುದನ್ನು ನೋಡಬಹುದು.

ಹೀಗಿರುವುದರಿಂದ ಸಾವಿರ ವರ್ಷಗಳ ದೀರ್ಘವಾದ ಔತಣಕೂಟ ನಡೆಯಬಹುದು. ಯಾಕಂದರೆ ವಿವಾಹವಾದ ಮದಲಿಂಗನು ಹಾಗೂ ಮದಲಗಿತ್ತಿ ಮಧುಮಾಸ ಆಚರಿಸಲು ಈ ಭೂಮಿಗೆ ಆಗಮಿಸುವುದರಿಂದ ಸಾವಿರ ವರ್ಷಗಳು ಅವರ ಪಾಲಿಗೆ ಸಂತೋಷದ ಹಾಗೂ ಉಲ್ಲಾಸದ ದಿನಗಳಾಗಿರುತ್ತದೆ.

**ಮದಲಗಿತ್ತಿಯಾದ ಸಭೆಯ ವಸ್ತ್ರಧಾರಣೆ:** ಪ್ರಕ. 21:2, 19:7–8 ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ. ಪ್ರಕಾಶ ಮಾನವೂ ನಿರ್ಮಲವೂ ಅದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವುದಕ್ಕೆ ಆಕೆಗೆ ಅನುಗ್ರಹಿಸೋಣವಾಯಿತು. ಆ ನಾರು ಮಡಿ ಅಂದರೆ ದೇವ ಜನರ ಸತ್ಕಾರ್ಯಗಳೇ. ಪ್ರಕ. 22:12, 1 ಕೊರಿ. 3:8–14 ರಕ್ಷಣೆ ಹೊಂದಿದ ನಂತರ ನಾವು ಮಾಡಿದ ಒಳ್ಳೆಯ ಪ್ರತಿಫಲವನ್ನು ಹೊಂದಿಕೊಂಡು ಕಿರೀಟಗಳನ್ನು ಧರಿಸಿ ಕ್ರಿಸ್ತನ ಮದಲಗಿತ್ತಿ ತನ್ನನ್ನೇ ಅಲಂಕರಿಸಿಕೊಂಡಿರುವ ವಿಧಾನವನ್ನು ಕೀರ್ತನೆಗಾರನು ವಿವರಿಸಿದ್ದಾನೆ. **"ಪಟ್ಟದ ರಾಣಿಯು ಓಫಿರ್ ದೇಶದ ಬಂಗಾರದ ಆಭರಣಗಳಿಂದ ಭೂಷಿತಳಾಗಿ ನಿನ್ನ ಬಲಭಾಗದಲ್ಲಿ ನಿಂತಿರುವಳು. ಅಂತಪುರದಲ್ಲಿ ರಾಜಕುಮಾರಿಯು ಎಷ್ಟೋ ವೈಭವದಿಂದಿದ್ದಾಳೆ; ಆಕೆಯು ಜರತಾರಿಯ ವಸ್ತ್ರವನ್ನು ಧರಿಸಿಕೊಂಡು ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಿಗೆ ಬರುವಳು. ಅವರು ಸಂಭ್ರಮೋತ್ಸವದಿಂದ ಬಂದು ಅರಮನೆಯೊಳಕ್ಕೆ ಪ್ರವೇಶಿಸುವರು"** (ಕೀರ್ತ. 45:9–14).

5) ಪ್ರಕ. 20:6 ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನು ಪರಿಶುದ್ಧನು ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ. ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರ್ಷ ಆಳುವರು. ವಿವಿಧ ಪುನರುತ್ಥಾನಗಳ ಬಗ್ಗೆ ಕಲಿಯುವುದಕ್ಕಿಂತ ಮುಂಚೆ 7 ವಿಧವಾದ ಪರದೈಸುಗಳ ಬಗ್ಗೆ ಕಲಿಯುವಂತದ್ದು ಅವಶ್ಯಕವಾಗಿದೆ.

ಪರದೈಸ್ (PARADISE) ಅಂದರೆ GARDEN OF EDEN, HEAVEN STATE OF FELICITY

ಏದೆನ್ ತೋಟ, ನಂದನವನ, ಸ್ವರ್ಗ, ಸು:ಖ ಧಾಮ ಎಂದು ಅರ್ಥ ಆಗುತ್ತದೆ. ಸತ್ಯವೇದವನ್ನು ವಿವರವಾಗಿ ಕಲಿಯುವಾಗ 7 ವಿಧವಾದ ಪರದೈಸುಗಳ ಬಗ್ಗೆ ತಿಳಿಯುತ್ತದೆ.

1) ಲೂಸಿಫರನ ಪರದೈಸು (ಯೆಶಾ. 14:12–15.
2) ಪರಲೋಕದ ಪರದೈಸು (2 ಕೊರಿ. 12:2–5).
3) ಏದೆನಿನ ಪರದೈಸು (ಆದಿ. 2:8).
4) ಹಳೆ ಒಡಂಬಡಿಕೆಯಲ್ಲಿ ಸತ್ತಂತ ಭಕ್ತರ ಆತ್ಮಗಳು ವಿಶ್ರಮಿಸುವ ಪರದೈಸು (ಆದಿ. 37:35).
5) ಹೊಸ ಒಡಂಬಡಿಕೆಯಲ್ಲಿ ಸತ್ತಂತಹ ಕ್ರೈಸ್ತ ವಿಶ್ವಾಸಿಗಳ ಆತ್ಮಗಳು ವಿಶ್ರಮಿಸುವ ಸ್ಥಳ (ಎಫೆ. 4:6–8).
6) ಸಾವಿರ ವರ್ಷದ ಭೂಮಿ ಎಂಬ ಪರದೈಸು (ಪ್ರಕ. 20:1–6).
7) ಹೊಸ ಭೂಮಿ ಎಂಬ ಪರದೈಸು (ಪ್ರಕ. 21:)

ಮುಂದುವರಿಯುವದು.....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

**ಯೋಹಾನನು ಸುವಾರ್ತೆಯಲ್ಲಿರುವ 7 ಅದ್ಭುತಗಳು :**

- ನೀರನ್ನು ದ್ರಾಕ್ಷರಸವನ್ನಾಗಿ ಮಾಡಿದ್ದು (ಯೋಹಾನ 2:1–11).
- ಶತಾಧಿಪತಿಯ ಆಳನ್ನು ಸ್ವಸ್ಥ ಮಾಡಿದ್ದು (ಯೋಹಾನ. 4:46–54).
- ಪಾರ್ಶ್ವವಾಯು ರೋಗಿಯನ್ನು ವಾಸಿ ಮಾಡಿದ್ದು (ಯೋಹಾನ. 5:1–18).
- ಐದು ಸಾವಿರ ಜನರಿಗೆ ಆಹಾರ ಕೊಟ್ಟಿದ್ದು (ಯೋಹಾನ. 6:1–14).
- ನೀರಿನ ಮೇಲೆ ನಡೆದದ್ದು (ಯೋಹಾನ 15:4).
- ಕುರುಡನನ್ನು ಸ್ವಸ್ಥ ಮಾಡಿದ್ದು (ಯೋಹಾ. 9:1–34).
- ಸತ್ತ ಲಾಜರನನ್ನು ಬದುಕಿಸಿದ್ದು (ಯೋಹಾನ 11:1–44).

ಜನಾಂಗಗಳು ನಿನ್ನ ಧರ್ಮವನ್ನು, ಸಕಲ ರಾಜರು ನಿನ್ನ ವೈಭವವನ್ನು ನೋಡುವರು
(ಯೆಶಾ. 62:2).

# ದೇವರೊಂದಿಗೆ ನಡೆ

**ವಯಸ್ಕರ ಸ್ವರ**

1) **ದೇವರೊಂದಿಗೆ ನಡೆಯಬೇಕಾದರೆ ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟಿರಬೇಕು: "ಯೆಹೋವನು ತನ್ನ ಭಕ್ತರನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದುಕೊಳ್ಳಿರಿ"** (ಕೀರ್ತ. 4:3). ದೇವರು ತನ್ನ ಜನರನ್ನು ತನಗೆಂದು ಪ್ರತ್ಯೇಕಿಸುತ್ತಾನೆ. ಇಂದು ಅನೇಕರು ದೇವರೊಂದಿಗೆ ನಡೆಯುವುದಕ್ಕಿಂತಲೂ ಹೆಚ್ಚಾಗಿ ಪಾಪದೊಂದಿಗೆ ಅನ್ಯೋನ್ಯತೆಯುಳ್ಳವರಾಗಿ ಜೀವಿಸಲು ಬಯಸುವರು. **"ನಾನು ನಿಮ್ಮನ್ನು ಇತರ ಜನಾಂಗಗಳಿಂದ ಪ್ರತ್ಯೇಕಿಸಿದ ನಿಮ್ಮ ದೇವರಾದ ಯೆಹೋವನು"** (ಯಾಜ. 20:24). ದೇವರು ಹೇಳುತ್ತಾನೆ, "ನೀವು ನನಗೆ ಮೀಸಲಾಗಿರಬೇಕು" (ಯಾಜ. 20:26). ಲೋಕ, ಪಾಪ, ಸೈತಾನನಿಂದ ಬೇರ್ಪಟ್ಟು ದೇವರಿಗಾಗಿ ಮೀಸಲಾಗಿರಬೇಕಾಗಿದೆ. **"ಆ ದಿನದಲ್ಲಿ ಯೆಹೋವನಿಗೆ ಮೀಸಲು ಎಂಬ ಲಿಪಿಯು ಕುದುರೆಗಳ ಘಂಟೆಗಳ ಮೇಲೂ ಕೆತ್ತಿರುವದು"** (ಜೆಕ. 14:20). ಪೇತ್ರನು ಬರೆಯುತ್ತಾನೆ, **"ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ"** (1 ಪೇತ್ರ. 2:9). ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುವಂತದ್ದಾಗಿದೆ. ಆದಾಮ ಹವ್ವರು ದೇವರ ಮಾತನ್ನು ಮೀರಿ ಪಾಪವನ್ನು ಮಾಡಿದ್ದಾಗ ಅವರು ಎಂದಿನಂತೆ ದೇವರೊಂದಿಗೆ ಸಂಚರಿಸಲು ಸಾಧ್ಯವಾಗಲಿಲ್ಲ. ಅವರು ದೇವರಿಗೆ ತಾವು ಕಾಣಿಸಬಾರದೆಂದು ತೋಟದ ಮರಗಳ ಹಿಂದೆ ಅಡಗಿಕೊಂಡರು (ಆದಿ. 3:8). ದೇವರು ಆದಾಮನಿಗೆ ನೀನು ಎಲ್ಲಿರುತ್ತಿ ಎಂದು ಕೂಗಿ ಕರೆಯಲು ಆದಾಮ ಕೊಟ್ಟ ಉತ್ತರ **"ನೀನು ಸಂಚರಿಸುವ ಸಪ್ಪಳ ಕೇಳಿ..... ಎಂದು ಹೆದರಿ ಅಡಗಿಕೊಂಡೆನು"** ಇದಕ್ಕೆ ಕಾರಣವೇ ಪಾಪ. ದೇವ ಮಗುವೇ ಗುಪ್ತವಾದ ಪಾಪದಲ್ಲಿ ಜೀವಿಸುವ ನೀನು ದೇವರೊಂದಿಗೆ ನಡೆಯಲು ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ ಯಾಕಂದರೆ ಪಾಪವು ದೇವರಿಗೆ ಅಸಹ್ಯವಾಗಿದೆ (ಕೀರ್ತ. 5:4). ಪೌಲನು ಬರೆಯುತ್ತಾನೆ, ನನ್ನ ಒಳಗಿರುವ ಪಾಪವೇ ಅಸಹ್ಯವಾದ ಕಾರ್ಯಗಳನ್ನು ನಡಿಸುತ್ತದೆ (ರೋಮ. 7:17). ಹುಟ್ಟಿದ್ದಾಗಿನಿಂದ ದೇವರಿಗೆ ಪ್ರತಿಷ್ಠಿತನಾಗಿದ್ದ ಸಂಸೋನನು (ಸೂರ್ಯ ಎಂಬುದಾಗಿ ಅರ್ಥ) ದೇವರಿಗೆ ವಿರುದ್ಧವಾಗಿ ಪಾಪ ಮಾಡಿದಾಗ ದೇವರು ಅವನನ್ನು ಬಿಟ್ಟು ಹೋದನು. ಆತನು ಫಿಲಿಷ್ಟಿಯರ ವಶಕ್ಕೆ ಒಪ್ಪಿಸಲ್ಪಟ್ಟನು (ನ್ಯಾಯ. 16:20). ನಮ್ಮ ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡಾ ಶಿಲುಬೆಗೆ ಹಾಕಲ್ಪಟ್ಟಿರಬೇಕು (ರೋಮ. 6:6). ದೇವ ಮಗುವೇ ಪಾಪದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಡಾ, ಪಾಪದಿಂದ ಮೋಸ ಹೋಗಿ **"ಜೀವಸ್ವರೂಪನಾದ ದೇವರನ್ನು ಬಿಟ್ಟು ಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದೆಂದು"** ಸತ್ಯವೇದ ಹೇಳುತ್ತದೆ, (ಇಬ್ರಿ. 3:13–14) ಪ್ರಿಯ ದೇವ ಮಗುವೇ ನೀನು ದೇವರೊಂದಿಗೆ ನಡೆಯಬೇಕಾಗಿದೆ. ದೇವ ಸ್ನೇಹ ಮಾಡಬೇಕಾದರೆ ಲೋಕದ ಸ್ನೇಹವನ್ನು ಬಿಡಬೇಕಾಗಿದೆ (ಯಾಕೋ. 4:4). ದೇವರನ್ನು ಪ್ರೀತಿಸುವವರು ಲೋಕವನ್ನು ಪ್ರೀತಿಸಬಾರದು. ಯಾಕಂದರೆ ಲೋಕದಲ್ಲಿರುವ 3 ಸಂಗತಿಗಳು ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನ ಡಂಬ ಇವೆಲ್ಲವೂ ತಂದೆಯಿಂದ ಹುಟ್ಟದೇ ಲೋಕದಿಂದ ಹುಟ್ಟಿದವುಗಳು. ಇದರಲ್ಲಿ ಮುಳುಗಿರುವವನು ದೇವರನ್ನು ಪ್ರೀತಿಸಲು ಸಾಧ್ಯವಿಲ್ಲ (1 ಯೋಹಾ. 2:15–16). ಕ್ರಿಸ್ತನು ಹೇಳುತ್ತಾನೆ, **"ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿಕೊಂಡಿದ್ದೇನೆ"** (ಯೋಹಾ. 15:19). ಪ್ರಿಯ ದೇವ ಮಗುವೇ, ನಿನ್ನನ್ನು ಕರೆದಾತನು ಪರಿಶುದ್ಧನಾದ ದೇವರು ಮಾತ್ರವಲ್ಲದೆ ನಿನ್ನನ್ನು ಪರಿಶುದ್ಧಮಾಡುವ ಯೆಹೋವ ಮೆಕ್ಕಾದೇಸ್ ಕೂಡಾ ಆಗಿದ್ದಾನೆ. ಪರಿಶುದ್ಧತೆಯಿಲ್ಲದೆ ಯಾರೂ ದೇವರನ್ನು ಕಾಣಲು ಅಸಾಧ್ಯ (ಇಬ್ರಿ. 12:14). ಇಂದು ಇಡೀ ಲೋಕದಲ್ಲಿ ನಾವು ಹೆಚ್ಚಾಗಿ ಕಾಣಬಹುದಾದ ಕ್ರೈಸ್ತರು ಯಾರೆಂದರೆ ಬರೀ ಭಾನುವಾರಕ್ಕೆ ಮಾತ್ರ ಸೀಮಿತವಾಗಿರುವರು. ಉಳಿದ ದಿನಗಳಲ್ಲಿ ತಮಗೆ ತೋಚಿದಂತೆ ಜೀವಿಸುವರು. ಇಂಥವರು ದೇವರೊಂದಿಗೆ ನಡೆಯಲು ಸಾಧ್ಯನಾ? ಪರಿಶುದ್ಧತೆ ಇದರ ಇನ್ನೊಂದು ಅರ್ಥ ಪ್ರತ್ಯೇಕಿಸಲ್ಪಟ್ಟದ್ದು. ದೇವರು ಹೇಳುತ್ತಾನೆ, ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು ಅವರು ನನಗೆ ಪ್ರಜೆಯಾಗಿರುವರು ಆದುದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ. ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ (2 ಕೊರಿ. 16:17). ನಾವು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟಿರುವಾಗ ದೇವರೊಂದಿಗೆ ನಡೆಯಬಹುದು.

2) **ದೇವರೊಂದಿಗೆ ನಡೆಯಬೇಕಾದರೆ ಆತನ ವಾಕ್ಯಕ್ಕೆ ವಿಧೇಯನಾಗಿರಬೇಕು** (2 ಯೋಹಾ. 9): ದೇವರ ಉಪದೇಶದಲ್ಲಿ ನೆಲೆಗೊಳ್ಳದೆ ತಳ್ಳಿ ಮುಂದಕ್ಕೆ ಹೋಗುವವನಿಗೆ ದೇವರೊಂದಿಗೆ ಅನ್ಯೋನ್ಯತೆ ಸಾಧ್ಯವಿಲ್ಲ. ಉಪದೇಶ

ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು (ಯೆಶಾ. 61:10).

ಕೈಗೊಂಡು ನಡೆಯುವವನು ದೇವರೊಂದಿಗೆ ನಡೆಯಬಹುದು. ಇಸ್ರಾಯೇಲ್ಯರ ಮೊದಲ ಅರಸನಾದ ಸೌಲನು ದೇವರ ವಾಕ್ಯವನ್ನು ಮೀರಿ ಅವಿಧೇಯನಾದಾಗ ದೇವರು ಅವನನ್ನು ತಳ್ಳಿಬಿಟ್ಟನು. **"ನೀನು ಯೆಹೋವನ ಮಾತನ್ನು ತಳ್ಳಿಬಿಟ್ಟದ್ದರಿಂದ ಆತನು ನಿನ್ನನ್ನು ಅರಸುತನದಿಂದ ತಳ್ಳಿಬಿಟ್ಟಿದ್ದಾನೆ"** (1 ಸಮು. 15:23). ಇಂದು ಅನೇಕರು ನಾನು ಕ್ರಿಸ್ತನೊಂದಿಗೆ ಜೀವಿಸುತ್ತೇವೆ. ಎಂದು ತೀರ್ಮಾನ ಮಾಡಿ ಸ್ವಲ್ಪ ಕಾಲದಲ್ಲಿ ವಾಕ್ಯ ಕೈಗೊಳ್ಳುವುದನ್ನು ಬಿಟ್ಟು ಬಿಟ್ಟು ಕ್ರಿಸ್ತನಿಂದ ಅಗಲಿ ಹೋಗುವರು. ಪ್ರಿಯನೇ ಏದೆನ್ ತೋಟದಲ್ಲಿ ಸಂತೋಷವಾಗಿ ದೇವರೊಂದಿಗೆ ಸಂಚರಿಸುತ್ತಿರುವ ಆದಾಮ ಹವ್ವರು ದೇವರ ವಾಕ್ಯಕ್ಕೆ ಅವಿಧೇಯರಾಗಿ ತಾನೇ ದೇವರಿಂದ ಬೇರ್ಪಟ್ಟು ಏದೆನ್ ತೋಟದಿಂದ ಹೊರಗೆ ಹಾಕಲ್ಪಟ್ಟಿದ್ದು ದೇವರ ವಾಕ್ಯ ಮೀರಿ ನಡೆಯುವಾಗ ದೇವರು ನಮ್ಮೊಂದಿಗೆ ಬರಲು ಬಯಸುವದಿಲ್ಲ.

**"ನಾನು ನಿಮ್ಮ ಮೇಲಿಗಾಗಿ ಈಗ ಬೋಧಿಸುವ ಆತನ ಆಜ್ಞಾವಿಧಿಗಳನ್ನು ಅನುಸರಿಸುತ್ತಾ ಇರುವುದನ್ನೇ ಹೊರತು ನಿಮ್ಮ ದೇವರಾದ ಯುಹೋವನು ನಿಮ್ಮಿಂದ ಬೇರೇನು ಕೇಳಿಕೊಳ್ಳುತ್ತಾನೆ? ಆಲೋಚಿಸಿರಿ"** (ಧರ್ಮೋ. 10:13). ಸತ್ಯವೇದ ಹೇಳುತ್ತದೆ, ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವವನು ಮಾತ್ರ ಆತನಲ್ಲಿ ನೆಲೆಗೊಳ್ಳಲು ಸಾಧ್ಯ. ಮಾತ್ರವಲ್ಲದೆ ದೇವರು ಸಹ ಅಂಥವರಲ್ಲಿ ನೆಲೆಗೊಳ್ಳುವನು.

(1 ಯೋಹಾ. 3:24) ಭಕ್ತನಾದ ದಾವೀದನು ಬರೆಯುತ್ತಾನೆ, **"ನಿನ್ನ ಆಜ್ಞೆಗಳನ್ನು ಅನುಸರಿಸುವುದರಲ್ಲಿ ಆಸಕ್ತನಾದೆನು ಆಲಸ್ಯಮಾಡಲಿಲ್ಲ"** (ಕೀರ್ತ. 119:60). **"ನಿನ್ನ ವಾಕ್ಯವನ್ನೇ ಅನುಸರಿಸಬೇಕೆಂದು ನನ್ನ ಕಾಲುಗಳನ್ನು ಯಾವ ಕೆಟ್ಟ ದಾರಿಗೂ ಹೋಗದಂತೆ ಕಾದಿದ್ದೇನೆ"** (ಕೀರ್ತ. 119:101). ಆದುದರಿಂದ ದಾವೀದನಿಗೆ ದೇವರು ಹತ್ತಿರವಿರುತ್ತಿದ್ದನು. ಅವನು ಕೈ ಹಾಕುವ ಕೆಲಸಗಳನ್ನು ಸಫಲ ಪಡಿಸುತ್ತಿದ್ದನು. ಸೌಲನು ದೇವರಿಗೆ ಅವಿಧೇಯನಾಗಿ ತಳ್ಳಪಟ್ಟದ್ದರಿಂದ ದೇವರು ಆತನಿಗೆ ಪ್ರವಾದಿಗಳಿಂದಾಗಲಿ, ಕನಸುಗಳಿಂದಾಗಲಿ ಉತ್ತರಿಸದೇ ಹೋದುದ್ದರಿಂದ ಅವನು ಯಕ್ಷಿಣಿ ಸ್ತ್ರೀಯ ಮೊರೆ ಹೊಕ್ಕುವುದನ್ನು ನಾವು ಓದುತ್ತೇವೆ (1 ಸಮು. 28:6–7). ಆದರೆ ದಾವೀದನು ದೇವರ ಸನ್ನಿಧಿಯಲ್ಲಿ ವಿಚಾರಿಸುವಾಗ ದೇವರು ಸ್ಪಷ್ಟವಾಗಿ ಉತ್ತರಿಸುವುದನ್ನು ನಾವು ಓದಬಹುದು (2 ಸಮು. 5:19). ಅವಿಧೇಯರಾಗುವರು ದೇವರ ಸ್ವರವನ್ನು ನಿರೀಕ್ಷಿಸಲು ಹಾಗೂ ಆತನೊಂದಿಗೆ ನಡೆಯಲು ಸಾಧ್ಯವಿಲ್ಲ. ಪ್ರಿಯ ದೇವ ಮಗುವೇ, ದೇವರ ಸ್ವರ ಕೇಳಿ ಆತನೊಂದಿಗೆ ನಡೆಯಬೇಕಾದರೆ ಆತನ ವಾಕ್ಯಕ್ಕೆ ವಿಧೇಯನಾಗಿರು. **"ದೇವರ ವಾಕ್ಯವನ್ನು ಉಲ್ಲಂಘಿಸುವವನು ನಾಶವಾಗುವನು. ಆಜ್ಞೆಯನ್ನು ಭಯಭಕ್ತಿಯಿಂದ ಕೈಗೊಳ್ಳುವವನು ಸಫಲವನ್ನು ಹೊಂದುವನು"** (ಜ್ಞಾನೋ. 13:13).

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ.**

---

## ಕಾಫಿ ರಾಗ !

ಬೆಳಗಾಗೆದ್ದು ಶರೀರಕ್ಕೆ ಲವಲವಿಕೆ ತರುವ ನಿಮ್ಮ ನೆಚ್ಚಿನ ಪೇಯ ಕಾಫಿ, ನಿಮ್ಮ ಚೆಲುವನ್ನೂ ಹೆಚ್ಚಿಸಬಲ್ಲದು....! ಎಂಬುದು?

ಆಕಾಲದಲ್ಲಿ ಅಲ್ಲಲ್ಲಿ ನೆರೆಯುವ ತಲೆಗೂದಲನ್ನು ಅಡಗಿಸುವುದರಲ್ಲಿ ಕಾಫಿಯದು ಎತ್ತಿದ ಕೈ. ಮದರಂಗಿ ಎಲೆಗಳನ್ನು ಕಡೆದು ತಲೆಗೆ ಲೇಪಿಸುವುದು ನಿಮಗೆ ತಿಳಿದಿದೆ. ಈ ಮಿಶ್ರಣಕ್ಕೆ ಒಂದು ಚಿಕ್ಕ ಚಮಚದಷ್ಟು ಕಾಫಿ ಪುಡಿ ಬೆರೆಸಿ ಕದಡಿ. ಅಥವಾ ದಪ್ಪನೆಯ ಡಿಕಾಕ್ಷನ್ ತೆಗೆದು ಬೆರೆಸಿ. ಅನಂತರ ಈ ಮಿಶ್ರಣವನ್ನು ತಲೆಗೆ ಹಚ್ಚಿ ಒಂದು ತಾಸು ಬಿಟ್ಟು ತೊಳೆಯಿರಿ. ಮದರಂಗಿಯ ಕೆಂಪು ತಿಳಿಯದಂತೆ ಇತರ ಕೂದಲಿನಂತೆಯೇ ಸಹಜ ಬಣ್ಣ ಪಡೆದುಕೊಳ್ಳುತ್ತದೆ. ಕೂದಲು ಉದುರುವಿಕೆಯನ್ನು ಇದು ತಡೆಗಟ್ಟುತ್ತದೆ. ಈ ಬಣ್ಣ ಬಹಳ ಕಾಲ ಉಳಿಯುತ್ತದೆ. ಈ ಲೇಪ ಹಚ್ಚುವ ಮುನ್ನ ತಲೆ ಚಿಪ್ಪಿಗೆ ನೀವು ಯಾವಾಗಲೂ ಬಳಸುವ ಎಣ್ಣೆಯನ್ನು ತಿಕ್ಕಿದರೆ ಉತ್ತಮ. ಮುಖಮಾರ್ಜನವಾಗಿ ಎರಡು ಚಮಚ ಕಾಫಿ ಪುಡಿಯನ್ನು ಹಸಿ ಹಾಲಿನಲ್ಲಿ ಹದ ಗಟ್ಟಿಯಾಗಿ ಕಲಸಿ ಮುಖಕ್ಕೆ ಹಚ್ಚಿ ಮಧ್ಯದ ಮೂರು ಬೆರಳುಗಳ ತುದಿಯಿಂದ ವರ್ತುಲಾಕಾರವಾಗಿ ತೀಡಿರಿ. ಕೆನ್ನೆಗಳು, ಗಲ್ಲ, ಹಣೆ ಹಾಗೂ ಮೂಗು, ಕುತ್ತಿಗೆಯ ಭಾಗಗಳನ್ನು ಕ್ರಮವಾಗಿ ಹೀಗೇ ತೀಡಿಕೊಳ್ಳಿ. ಅನಂತರ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆದು ಒಣಗಲು ಬಿಡಿ. ಅನಂತರ ಯಾವುದೇ ಮಾಯಿಶ್ಚರೈಸರ್ ಹಚ್ಚಬಹುದು. ಇದರಿಂದ ತ್ವಚೆಯಲ್ಲಿ ಇರಬಹುದಾದ ಸೂರ್ಯಕಂದು ನಿವಾರಣೆಯಾಗಿ ತ್ವಚೆ ಸಚೇತನಗೊಳ್ಳುತ್ತದೆ. ಮರುಕಾಂತಿ ಪಡೆಯುತ್ತದೆ. ಕಾಫಿಯಲ್ಲಿ ಸುಕ್ಕು ತಡೆಯುವ ವಿಶೇಷ ಗುಣವಿದೆ.

ಕೊಕೋ ಬೆಣ್ಣೆ (ಅಥವಾ ಸಾದಾ ಬೆಣ್ಣೆ), ಹಾಲು ಮತ್ತು ಸಕ್ಕರೆಯೊಂದಿಗೆ ಕಾಫಿ ಪುಡಿಯನ್ನು ದಪ್ಪಗೆ ಕಲಸಿಕೊಳ್ಳಿ. ಕಣ್ಣಿನ ಸುತ್ತು ಹೊರತುಪಡಿಸಿ ಮುಖಕ್ಕೆ ಹಚ್ಚಿಕೊಳ್ಳಿ. ಒಣಗುವವರೆಗೂ ಬಿಟ್ಟು, ಅನಂತರ ಉಗುರು ಬೆಚ್ಚಗೆ ನೀರಿನಿಂದ ತೊಳೆದುಕೊಳ್ಳಿ. ಈ ಫೇಸ್‌ಪ್ಯಾಕ್ ನಿಮ್ಮ ಮುಖದ ಹೊಳಪು ಹೆಚ್ಚಿಸುವುದು ದಿಟ. ಈ ಲೇಪದಿಂದ ನಿಮ್ಮ ಮೈಕೈಯನ್ನೂ ತಿಕ್ಕಿಕೊಳ್ಳಬಹುದು, ಮೈಕಾಂತಿ ಹೆಚ್ಚಿಸಿ ಸುಕ್ಕು ನಿವಾರಿಸುತ್ತದೆ.

ಘಮಘಮ ಕಾಫಿಗೆ ಇರುವ ಈ ವೈಶಿಷ್ಟ್ಯಪೂರ್ಣ ಗುಣಗಳು ನಿಮ್ಮ ಸೌಂದರ್ಯಪ್ರಜ್ಞೆಗೂ ಇಂಬುಕೊಡಬಲ್ಲದು.

ಯೆಹೋವನೆಂಬ ನಾನು ಕ್ಲುಪ್ತಕಾಲದಲ್ಲಿ ಇದನ್ನು ಬಲುಬೇಗನೆ ಉಂಟುಮಾಡುವೆನು (ಯೆಶಾ. 60:22).

# ಅರಮನೆಯ ಕೆಲಸದವನಾಗಿದ್ದ ಪೇತ್ರನಿಗಾದ ಹಿಂಸೆ

ಕ್ರಿಸ್ತಶಕ 304ರಲ್ಲಿ ಕ್ರೈಸ್ತರಿಗೆ ಹಿಂಸೆ ಉಂಟಾಯಿತು. ನಿಕೋಮೋದಿಯದ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಪೇತ್ರನೂ ಒಬ್ಬನು. ಇವನು ಯೇಸುವನ್ನು ತನ್ನ ರಕ್ಷಕನನ್ನಾಗಿ ಅಂಗೀಕರಿಸಿ ಆತನಲ್ಲಿ ಸಂತೋಷ ಪಡುತ್ತಿದ್ದದರಿಂದ ಮೂರ್ತಿ ಪೂಜಕನೂ ಕ್ರೈಸ್ತರ ಹಿಂಸಕನೂ ಆದ ಗಲೇರಿಯನು ಅವನನ್ನು ಹಿಡಿಸಿ ಬಾರುಗಳಿಂದ ಗಾಯಗಳಾಗುವಷ್ಟು ಹೊಡೆಸಿ ಆ ಗಾಯಗಳಲ್ಲಿ ಉಪ್ಪನ್ನೂ ಹುಳಿ ರಸವನ್ನೂ ಹಾಕಿಸಿದನು. ಇಷ್ಟು ಕಠಿಣ ಹಿಂಸೆ ತಾಳುತ್ತಿದ್ದ ಪೇತ್ರನು ದೃಢ ವಿಶ್ವಾಸಿಯಾಗಿ ತನ್ನ ರಕ್ಷಕನಾದ ಯೇಸುವಿಗಾಗಿ ತನ್ನ ಪ್ರಾಣವನ್ನು ಕೊಡಲು ತೀರ್ಮಾನಿಸಿದನು. ಇದನ್ನರಿತ ಆ ವಿರೋಧಿಗಳು ಅವನನ್ನು ಉರಿಗೆಂಡಗಳ ಮೇಲೆ ತಡೆ ತಡೆದು ಸುಟ್ಟುಕೊಂದರು. ಇದೇ ರೀತಿಯಾಗಿ ಉಳಿದವರಲ್ಲಿ ಒಬ್ಬೊಬ್ಬರನ್ನೇ ಅತೀ ಕ್ರೂರ ರೀತಿಯಲ್ಲಿ ಹಿಂಸಿಸಿ ಕೊಲ್ಲುವುದಕ್ಕೆ ಕೊಲೆಗಡುಕರು ಬೇಸತ್ತು ಒಂದು ನೂರು ಮಂದಿಯಂತೆ ದೊಬ್ಬುತ್ತಿದ್ದರು. ಕೆಲವರಿಗೆ ಭಾರವಾದ ಕಲ್ಲುಗಳನ್ನು ಕಟ್ಟಿ ಅವರನ್ನು ಸಮುದ್ರದಲ್ಲಿ ಮುಳುಗಿಸಿ ಕೊಲ್ಲುತ್ತಿದ್ದರು. ಈ ರೀತಿಯಲ್ಲಿ ಆಗ ಕ್ರೈಸ್ತರಿಗೆ ಎಷ್ಟಕ್ಕೆ ಹಿಂಸೆ ಉಂಟಾಯಿತೋ ಅಷ್ಟಕ್ಕೆ ಅವರಲ್ಲಿದ್ದ ವಿಶ್ವಾಸವೂ ಧೈರ್ಯವೂ ಸಂತೋಷವೂ ಶೋಭಿಸಿದವು.

"ಕರ್ತನಲ್ಲಿ ಸತ್‌ಕ್ರೈಸ್ತರು ಪಡುವ ಸಂತೋಷವನ್ನು ಯಾವ ಶಕ್ತಿಯೂ ಕೆಡಿಸಲಿಕ್ಕಾಗದು. ದೇವರಿಗೆ ಸ್ತೋತ್ರ. ಸಂಕಟಗಳು ಹೆಚ್ಚಾದಂತೆ ಅವರ ಸಂತೋಷವೂ ಹೆಚ್ಚುವದು.

ಆಫ್ರಿಕಾ ಖಂಡದೊಳಗೆ ಅಲ್ಲಲ್ಲಿ ಕ್ರೈಸ್ತರಿಗೆ ಆದ ಹಿಂಸೆ ಸುಮಾರು ನಾಲ್ಕನೇ ಶತಮಾನದಲ್ಲಿ ಆಫ್ರಿಕಾ ಖಂಡದೊಳಗೆ ಕ್ರೈಸ್ತರಿಗೆ ಹಿಂಸೆ ಉಂಟಾಯಿತು. ಅಲ್ಲಿದ್ದ ಕ್ರೈಸ್ತರಲ್ಲಿ ಕೆಲವರನ್ನು ಅಗ್ನಿಯಿಂದ, ಕೆಲವರನ್ನು ನೀರಿನಲ್ಲಿ ಮುಳುಗಿಸಿ, ಕೆಲವರನ್ನು ಖಡ್ಗದಿಂದ ಸಂಹರಿಸಿದರು. ಇದೂ ಅಲ್ಲದೆ ಹಸಿವೆಯಿಂದಲೂ ಕೆಲವರನ್ನು ಶಿಲುಬೆಗೆ ಹಾಕುವದರ ಮೂಲಕವಾಗಿಯೂ ಕೊಂದರು.

ಅಲೆಗ್ಸಾಂಡರ್ ಪಟ್ಟಣದಲ್ಲಿ ಬಹಳ ಮಂದಿ ವಿಶ್ವಾಸಿಗಳ ಕೈಗಳನ್ನು ಹಿಂದೆ ಬಾಗಿಸಿ ಕಟ್ಟಿ ಇಡೀ ಶರೀರದ ಸಂದುಗಳನ್ನೆಲ್ಲಾ ಎಳೆದು ತಪ್ಪಿಸಿ, ಹಿಂಸಿಸಿದರು. ಇನ್ನೂ ಕೆಲವರನ್ನು ನಿಲ್ಲಿಸಿ ಕಬ್ಬಿಣದ ಮೊಳೆಗಳಿಂದ ಮೈಮೇಲಿದ್ದ ಮಾಂಸವನ್ನೆಲ್ಲಾ ಕಿತ್ತು ಬಿಡುತ್ತಿದ್ದರು. ಬೇರೆ ಕೆಲವು ವಿಶ್ವಾಸಿಗಳ ಮೇಲೆ ಯಾತನೆಯ ಯಂತ್ರಗಳನ್ನು ಪ್ರಯೋಗಿಸಿ ಆ ಗಾಯಗಳನ್ನು ಮಾಯಿಸಿ ತಿರುಗಿ ಆ ಯಂತ್ರಗಳನ್ನು ಪ್ರಯೋಗಿಸಿ ಹಿಂಸಿಸಿದರು.

ಡೆಬಾಯಿಸ ನಾಡಿನಲ್ಲಿ ಕ್ರೈಸ್ತರ ಶರೀರಗಳನ್ನು ಚಿಪ್ಪುಗಳಿಂದ ಗೀರಿ ಗಾಯಪಡಿಸುತ್ತಿದ್ದರು. ಸ್ತ್ರೀಯರನ್ನು ಪೂರಾ ಬೆತ್ತಲೆಮಾಡಿ ಮರಗಳಿಗೆ ತೂಗುಹಾಕುತ್ತಿದ್ದರು. ಬೇರೆಯವರನ್ನಾದರೋ ಅವರ ಒಂದು ಕಾಲನ್ನು ಒಂದು ಗಿಡಕ್ಕೂ ಮತ್ತೊಂದು ಕಾಲನ್ನು ಮತ್ತೊಂದು ಗಿಡಕ್ಕೂ ಕಟ್ಟಿ ಗಿಡಗಳನ್ನು ಎಳೆದು ಬಾಗಿಸಿ ಕಟ್ಟಲ್ಪಟ್ಟವರನ್ನು ಸೀಳಿ ಕೊಲ್ಲುತ್ತಿದ್ದರು.

ಸಣ್ಣ ಆಸ್ಯದಲ್ಲಿ ಹಿಂಸಕರು ಕ್ರೈಸ್ತರನ್ನು ಚೂಪಾದ ಮೊಳೆಗಳಿಂದ ಉಗುರಿನ ತುದಿ ಹಿಡಿದು ಬೆರಳುಗಳನ್ನು ಚುಚ್ಚಿ ಚುಚ್ಚಿ ತೂತುಮಾಡಿ ಸೀಸವನ್ನು ಕರಗಿಸಿ ಬೆನ್ನಿನ ಮೇಲೆ ಸುರಿಯುತ್ತಿದ್ದರು. ಯೌವನಸ್ಥೆಯರನ್ನು ಇನ್ನು ಕಠಿಣವಾಗಿ ಹಿಂಸಿಸಿ ಕೊಲ್ಲುತ್ತಿದ್ದರು. ಆ ಸಮಯದಲ್ಲಿ 34 ವರ್ಷ ಪ್ರಾಯದ ಸಭಾ ಪಾಲಕನೂ ಚರಿತ್ರೆಗಾರನು ಆದ ಯುಸೇಬಿಯಾನನು ಆಗಿನ ಹಿಂಸೆಯನ್ನು ಕಂಡು ಹೀಗೆ ಬರೆದಿದ್ದಾನೆ: "ಕೊಲೆಯಿಂದ ಹಿಂಸಕರ ಕತ್ತಿಗಳು ಮೊಂಡವಾಗಿ ಸವೆದುಹೋದವು. ಕೊಲೆ ಮಾಡುವದಕ್ಕಿದ್ದ ಆಳುಗಳ ಕೈಗಳು ಕ್ರೈಸ್ತರನ್ನು ಕೊಲೆ ಮಾಡಿ ಮಾಡಿ ದಣಿದು ಹೋಗಿ, ಸರದಿಯ ಮೇಲೆ ಕೊಲೆಮಾಡಿದರು. ಆದಾಗ್ಯೂ ರಕ್ತಸಾಕ್ಷಿಗಳಾದ ಕ್ರೈಸ್ತರು ತಮ್ಮ ಪ್ರಾಣ ಬಿಡುವವರೆಗೆ ಸರ್ವಶಕ್ತನಾದ ದೇವರ ಸ್ತೋತ್ರಕ್ಕಾಗಿ ಕೀರ್ತನೆ ಹಾಡುತ್ತಿದ್ದರು. ಆ ಕಾಲದೊಳಗೆ ಸಣ್ಣ ಆಸ್ಯದಲ್ಲಿ ಒಂದೇ ತಿಂಗಳೊಳಗಾಗಿ 15,000 ಕ್ರೈಸ್ತರು ರಕ್ತಸಾಕ್ಷಿಗಳಾದರು. ಇಷ್ಟಾದರೂ ವಿಶ್ವಾಸಿಗಳ ಬಲವು ಒಂದು ರವೆಯಷ್ಟಾದರೂ ಕುಂದಿ ಹೋಗಲಿಲ್ಲ.

ಪೌಲನಿಗಾದ ಹಿಂಸೆಗಳಲ್ಲಿ ಇದೂ ಒಂದು ತರುವಾಯ ಅಂತಿಯೋಕ್ಯದಿಂದಲೂ ಇಕೋನ್ಯದಿಂದಲೂ ಯೆಹೂದ್ಯರು ಬಂದು ಜನರನ್ನು ಪ್ರೇರಿಸಿ ಪೌಲನನ್ನು ಕೊಲ್ಲುವದಕ್ಕಾಗಿ ಕಲ್ಲೆಸೆದು ಅವನು ಸತ್ತುಹೋದನೆಂದು ಭಾವಿಸಿ ಊರ ಹೊರಕ್ಕೆ ಎಳೆದುಬಿಟ್ಟರು (ಅ.ಕೃ. 14:19).

ಹಿಂಸೆ ತಾಳಿದ ಪೌಲನು ಹೇಳುವ ಧೈರ್ಯದ ಮಾತು **"ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತ**

ಆಜ್ಞೆಯೇ ದೀಪ, ಉಪದೇಶವೇ ಬೆಳಕು, ಶಿಕ್ಷಣಪೂರ್ವಕವಾದ ಬೋಧನೆಯೇ ಜೀವದ ಮಾರ್ಗ (ಜ್ಞಾನೋ. 6:23).

**ನಂಬಿಕೆಯುಲ್ಲಿ ಸ್ಥಿರವಾಗಿರ್ರಿ ಎಂದು ಅವರನ್ನು ಧೈರ್ಯಗೊಳಿಸಿದೆನು"** (ಅ.ಕೃ. 14:22). ಮಗಳಿಂದ ತಂದೆಗೆ ಕ್ಷಮೆದೊರೆಯಿತು ಒಂದು ಸಾರಿ ಹದಿನಾಲ್ಕು ವರ್ಷದ ಒಬ್ಬ ಫ್ರೆಂಚ್ ಹುಡುಗಿಯು ನೆಪೋಲಿಯನ್‍ನ ಪಾದಕ್ಕೆ ಬಿದ್ದು "ಅಯ್ಯಾ, ಕ್ಷಮಿಸು; ನನ್ನ ತಂದೆಯನ್ನು ಮನ್ನಿಸು" ಎಂದು ಬೇಡಿಕೊಂಡಳು.

"ನಿನ್ನ ತಂದೆ ಯಾರು? ಮತ್ತು ನೀನು ಯಾರು" ಎಂದು ಕೇಳಿದ ಆ ನೆಪೋಲಿಯನ್.

"ನನ್ನ ಹೆಸರು ಲಾಬೋಲಿಯಾ. ನನ್ನ ತಂದೆಗೆ ಮರಣ ಶಿಕ್ಷೆಯಾಗಬೇಕೆಂದು ತೀರ್ಪಾಗಿದೆ" ಎಂದು ಹುಡುಗಿಯು ಕಣ್ಣೀರು ಸುರಿಸುತ್ತಾ ಹೇಳಿದಳು.

ಹಾ! ಹುಡುಗಿಯೇ, ನಿನ್ನ ತಂದೆಯು ಈ ಅಪರಾಧಮಾಡಿದ್ದು ಇದು ಎರಡನೆಯ ಸಾರಿ. ನಾನು ಈಗ ಅದನ್ನು ಕ್ಷಮಿಸಲಾರೆ" ಅಂದನು ನೆಪೋಲಿಯನ್.

ಆ ಬಡ ಹುಡುಗಿಯು ಗೋಳಾಡುತ್ತಾ "ಅಯ್ಯಾ, ನೀವು ಹೇಳಿದ್ದು ನಿಜ. ಆದರೆ ನಾನು ನ್ಯಾಯವನ್ನು ಕೇಳುವದಿಲ್ಲ, ಕ್ಷಮೆಯನ್ನು ಬೇಡುತ್ತಿದ್ದೇನೆ. ಅಯ್ಯಾ, ತಾವು ಹಾಗೂ ಕ್ಷಮಿಸಬೇಕು. ಕ್ಷಮಿಸಿರೆಂದು ನಿಮ್ಮನ್ನು ಬೇಡುತ್ತೇನೆ" ಅಂದಳು ಆ ಹುಡುಗಿ.

ನೆಪೋಲಿಯನ್ ಸ್ವಲ್ಪ ಹೊತ್ತು ಯೋಚಿಸಿ ಆ ಹುಡುಗಿಯ ಕೈ ಹಿಡಿದು "ಆಗಲಿ ಮಗಳೇ, ನಿನಗಾಗಿ ನಿನ್ನ ತಂದೆಯನ್ನು ಕ್ಷಮಿಸಿಬಿಡುತ್ತೇನೆ" ಅಂದನು.

ಹಿಡಿಸಲಾರದಷ್ಟು ಆನಂದ ಆ ಹುಡುಗಿಗಾಯಿತು. ಯೇಸುವು ಇದಕ್ಕಿಂತಲೂ ಪ್ರೀತಿಸ್ವರೂಪನು. ಆತನು ತನ್ನ ಬಳಿಗೆ ಬರುವವರ ಪಾಪವನ್ನೆಲ್ಲಾ ಮನ್ನಿಸಿ ಹೃದಯಕ್ಕೆ ಆನಂದವನ್ನು ಕೊಡುವನು.

**"ನೀನು ನನಗೆ ಮುದ್ದು ಕೊಡಲಿಲ್ಲ; ಆದರೆ ಈ ಸ್ತ್ರೀಯು ನಾನು ಒಳಗೆ ಬಂದಾಗಿನಿಂದ ನನ್ನ ಪಾದಗಳಿಗೆ ಮುದ್ದಿಡುವದನ್ನು ಬಿಡಲಿಲ್ಲ"** (ಲೂಕ. 7:45).

– ಸಂಗ್ರಹ.

## **ಸಮಾರ್ಯ ಸ್ತ್ರೀಗೆ ಯೇಸು ಸಾಕ್ಷಿ ಹೇಳಿದನು** (ಯೋಹಾ. 4:1–42)

ಸೌವಾರ್ತಿಕರ ಗುರುವಾಗಿರು ಯೇಸುವಿನಿಂದ ಸುವಾರ್ತೀಕರಣ ಮತ್ತು ಸೇವೆಯ ಬಗ್ಗೆ ಪಾಠ :

**ಸಂದರ್ಭ :** ಯೆರುಸಲೇಮಿನಿಂದ ಗಲಿಲಾಯಕ್ಕೆ ಹೋಗುವ ಮಾರ್ಗದಲ್ಲಿ ಯೂದಾಯದ ಬೆಟ್ಟಗಳಲ್ಲಿ ಯೇಸು ಸುವಾರ್ತೆ ಸಾರುತ್ತಿದ್ದನು. ಮಧ್ಯಾಹ್ನದ ವೇಳೆಯಲ್ಲಿ ಯೇಸು ತನ್ನ ಶಿಷ್ಯರೊಟ್ಟಿಗೆ ಸಮಾರ್ಯದ ಸುಖರೆಂಬ ಊರಿಗೆ ಯಾಕೋಬನ ಬಾವಿ ಇರುವಲ್ಲಿಗೆ ಬಂದನು. ಅವರು ದಣಿದ್ದು ಹಸಿದಿದ್ದರು. ಶಿಷ್ಯರು ಆಹಾರ ತರುವದಕ್ಕಾಗಿ ಪಟ್ಟಣಕ್ಕೆ ಹೋಗಿದ್ದಾಗ, ಯೇಸು ಸಮಾರ್ಯ ಸ್ತ್ರೀಯೊಟ್ಟಿಗೆ ಮಾತಾಡುತ್ತಿದ್ದನು.

1) **ಯೇಸು ಸಾಕ್ಷಿ ಹೇಳಲು ಆತ್ಮೀಕವಾಗಿ ಸಿದ್ಧನಾಗಿದ್ದನು:** ದೇವರೊಂದಿಗೆ ನೇರವಾದ ಸಂಬಂಧದ ಮೂಲಕ, ಪ್ರಾರ್ಥನೆಯಿಂದ, ಆತ್ಮನಲ್ಲಿ ನಡೆಯುವದರಿಂದ, ಆತ್ಮೀಕವಾಗಿ ಯಾವಾಗಲೂ ಸಿದ್ಧರಾಗಿರಬೇಕು. ಸುವಾರ್ತಿಕರಣದ ಕಲೆ ವಿವಿಧ ಜನರು, ಅವರ ಸಂಸ್ಕೃತಿಗಳನ್ನು ನೀವು ಕಲಿಯಲು ಸಾಧ್ಯ.

2) **ಯೇಸು ಉದ್ದೇಶ ಪೂರ್ವಕವಾಗಿ ಸಮಾರ್ಯ ಸ್ತ್ರೀಯನ್ನು ಭೇಟಿ ಮಾಡಿ ಮಾತಾಡಿಸಿದನು** (ಯೋಹಾ. 4:7) : * ಇತರಲ್ಲಿ ಸುವಾರ್ತೆ ಹೇಳಲು ಉದ್ದೇಶಪೂರ್ವಕವಾಗಿ ಅನ್ಯರನ್ನು ಭೇಟಿಮಾಡಬೇಕು. * ಸುವಾತೀಕರಣಕ್ಕಾಗಿ ಅವಸರಗಳನ್ನು ತೆಗೆದು ಉಪಯೋಗಿಸಬೇಕು. *ಯಾರ ವಿರುದ್ಧವಾಗಿಯೂ ದುರಾಭಿಪ್ರಾಯವುಳ್ಳವರಾಗಿರಬಾರದು.

3) **ಯೇಸು ನೀರನ್ನು ಸಂಭಾಷಣೆ ಪ್ರಾರಂಭಿಸುವುದಕ್ಕಾಗಿ ಉಪಯೋಗಿಸಿದನು** (ಯೋಹಾ. 4:7–9). ಸಂಭಾಷಣೆಯನ್ನು ಪ್ರಾರಂಭಿಸುವುದಕ್ಕಾಗಿ ಸಾಮಾನ್ಯವಾದ ವಿಷಯವನ್ನು ಉಪಯೋಗಿಸಬಹುದು. ನಂತರ ಕರ್ತನ ಬಗ್ಗೆ ಮತ್ತು ಅವರಿಗೆ ಯೇಸುವಿನ ಅವಶ್ಯಕತೆಯ ಬಗ್ಗೆ ಮಾತಾಡಬಹುದು. ಸುವಾರ್ತೆ ಸಾರುವಾಗ ಇಬ್ಬರಿಗೂ ಆಸಕ್ತಿ ಇರುವ ಸಾಮಾನ್ಯ ವಿಷಯವನ್ನು ಹಂಚಿಕೊಳ್ಳಲು ಪ್ರಯತ್ನಿಸಬೇಕು. ಇದು ನಿಮ್ಮ ಕೇಳುಗರೊಟ್ಟಿಗೆ ಗುರುತಿಸಿಕೊಳ್ಳಲು ಅಥವಾ ಅವರು ನಿಮ್ಮೊಟ್ಟಿಗೆ ಗುರುತಿಸಿಕೊಳ್ಳಲು ಒಳ್ಳೆಯ ಮಾರ್ಗವಾಗಿದೆ. ಅದೇ ತರಹದ

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 6:17).

ಸಮಸ್ಯೆಯೊಟ್ಟಿಗೆ ಅವರನ್ನು ಇಷ್ಟಪಡುತ್ತೀರೆಂದೂ ಅದರ ಮೂಲಕ ನೀವು ಒಬ್ಬ ರಕ್ಷಕನನ್ನು, ಸ್ನೇಹಿತನನ್ನು ಮತ್ತು ಸಹಾಯಕನನ್ನು ಕಂಡುಕೊಂಡಿದ್ದೀರೆಂದು ತೋರಿಸಿರಿ. ಆದರೆ ಪಾಪದೊಂದಿಗೆ ಗುರುತಿಸಿಕೊಳ್ಳಬೇಡಿರಿ (1 ಕೊರಿ. 9:22).

4) **ಯೇಸು ಆಕೆಯ ಕುತೂಹಲ, ಆಸಕ್ತಿ ಮತ್ತು ಆತ್ಮೀಕ ಸಂಗತಿಗಳ ಬಗ್ಗೆ ಆಸೆಯನ್ನು ಕೆರಳಿಸಿದನು** (ಯೋಹಾ. 4:10, 3:13–14). ರಕ್ಷಣೆಯ ಮತ್ತು ಯೇಸುವಿನಲ್ಲಿರುವ ಆತ್ಮೀಕ ಆಶೀರ್ವಾದಗಳ ಬಗ್ಗೆ ಕುತೂಹಲ, ಆಸಕ್ತಿ ಮತ್ತು ಆಸೆಯನ್ನು ಕೆರಳಿಸಬೇಕು. ಯೇಸುವಿನ ಮತ್ತು ರಕ್ಷಣೆಯ ಸಕಾರಾತ್ಮಕ ಪ್ರಯೋಜನಗಳಾದ ಸಮಾಧಾನ, ಸಂತೋಷ, ಪ್ರೀತಿ, ಕ್ಷಮಾಪಣೆ ಮತ್ತು ಯೇಸುವಿನಲ್ಲಿ ನಮಗಿರುವ ರಕ್ಷಣೆಯ ಕುರಿತು ಒತ್ತಿ ಹೇಳಬೇಕು. ಜನರ ಅನುಭವದ ಮತ್ತು ಯಥಾರ್ಥವಾದ ಅವಶ್ಯಕತೆಗಳ ಮೇಲೆ ಕೇಂದ್ರೀಕರಿಸಬೇಕು.

5) **ಯೇಸು ಯಥಾರ್ಥವಾಗಿ ಸಮಾರ್ಯ ಸ್ತ್ರೀಯೊಂದಿಗೆ ಸಂಭಾಷಣೆ ಮಾಡಿದನು** (ಯೋಹಾ. 4:13–14). ವೇಗವಾಗಿ ಹೇಳದೇ ನಿಧಾನವಾಗಿ, ಮೃದುವಾಗಿ ಮತ್ತು ಸೂಕ್ಷ್ಮವಾಗಿ ಹೇಳಬೇಕು ಮತ್ತು ಸರಿಯಾಗಿ ಆಲಿಸಿ ಜನರಿಗೆ ಪ್ರತಿಕ್ರಿಯೆಯನ್ನು ನೀಡಬೇಕು. ಸಂಭಾಷಣೆಯು ಸಂಭಾಷಣಾ ರೂಪದಲ್ಲಿರಬೇಕು.

6) **ಯೇಸು ಆತ್ಮೀಕ ವರವಾದ ವಿವೇಚನೆಯ ವರವನ್ನು ಉಪಯೋಗಿಸಿದನು** (4:16–18): ಸುವಾರ್ತೆ ಸಾರುವಾಗ ನಿಮ್ಮ ಆತ್ಮೀಕ ವರಗಳನ್ನು ಉಪಯೋಗಿಸಬೇಕು.

1 ಕೊರಿ. 12:8–10 ಸುವಾರ್ತೀಕರಣಕ್ಕೆ ಆತ್ಮೀಯ ವರಗಳು, ಮಾರ್ಗದರ್ಶನ ಮತ್ತು ಶಕ್ತಿಗಾಗಿ ಪರಿಶುದ್ಧಾತ್ಮನ ಸಹಭಾಗಿತ್ವದೊಡನೆ ಕೆಲಸ ಮಾಡಬೇಕು.

7) **ಯೇಸು ಚಾತುರ್ಯದಿಂದ ಸ್ತ್ರೀಯ ಅವಶ್ಯಕತೆಗಳನ್ನು ಗುರುತಿಸಿದನು** (4:16–18): ಚಾತುರ್ಯದಿಂದ ಒಬ್ಬ ವ್ಯಕ್ತಿಯ ಅವಶ್ಯಕತೆಯನ್ನು ಗುರುತಿಸಬೇಕು. ಅದು ಯಾವುದೆಂದರೆ ಎಲ್ಲರೂ ಪಾಪ ಮಾಡಿದ್ದಾರೆ (ರೋಮ. 3:23). ಅವರಿಗೆ ರಕ್ಷಕನ ಅವಶ್ಯಕತೆ ಇದೆ ಮತ್ತು ನಮ್ಮನ್ನು ನಾವೇ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಅನವಶ್ಯಕವಾಗಿ ಅವರ ಮನನೋಯಿಸುವುದನ್ನು ತಡೆಯಿರಿ, ಗೌರವ ತೋರಿಸಿರಿ. ಯೇಸುವಿನ ಮತ್ತು ಶುಭ ಸಂದೇಶದ ಬಗ್ಗೆ ಪ್ರಸಂಗಿಸಿರಿ. ಅಲ್ಲದೆ ಕೇವಲ ಮಾಡು ಅಥವಾ ಮಾಡಬಾರದವುಗಳ ಬಗ್ಗೆ ಮತ್ತು ನಿಯಮಗಳ ಬಗ್ಗೆ ಅಲ್ಲ. ಮೊದಲು ಅವರ ಪಾಪ ಜೀವಿತದ ಅಶುಭ ಸಂದೇಶವನ್ನು ತಿಳಿಸಿದನಂತರ ಕ್ರಿಸ್ತನಲ್ಲಿ ದೊರಕುವ ರಕ್ಷಣೆಯ ಕುರಿತಾದ ಶುಭ ಸಂದೇಶವನ್ನು ಹಂಚಿರಿ.

8) **ಯೇಸು ತನ್ನ ಸಂಭಾಷಣೆ ಬೇರೆ ವಿಷಯದ ಕಡೆಗೆ ಹೋಗದ ಹಾಗೆ ನೋಡಿಕೊಂಡನು** (4:19–24): ಪ್ರಾಮುಖ್ಯವಲ್ಲದ ಸಂಗತಿಗಳಿಂದ ಅಥವಾ ಚಾತುರ್ಯದ ಪ್ರಶ್ನೆಗಳಿಂದ ನಿಮಗೆ ನೀವೇ ಪಕ್ಕಕ್ಕೆ ಹೋಗದಿರಿ. ತರ್ಕ ಮತ್ತು ಜಗಳಗಳನ್ನು ತಪ್ಪಿಸಿರಿ. 2 ತಿಮೊ. 2:23–24 ಯಾವಾಗಲೂ ನಿಮ್ಮ ಕೇಳುಗರನ್ನು ಅವರ ವೈಯಕ್ತಿಕ ರಕ್ಷಣೆಯ ಅವಶ್ಯಕತೆಗೆ ನಡೆಸಿರಿ.

9) **ಯೇಸು ತನ್ನೊಟ್ಟಿಗೆ ಮುಖಾಮುಖಿಯಾಗಿ ಆಕೆಯನ್ನು ತಂದನು** (4:26). ಯೇಸು ಜೀವಿಸುತ್ತಿದ್ದಾನೆ ಮತ್ತು ಈ ದಿನವೂ ಅವರನ್ನು ರಕ್ಷಿಸುತ್ತಾನೆ. ಎಂಬುದನ್ನು ನಿಮ್ಮ ಶತ್ರುಗಳು ತಿಳಿದಿರಲಿ. ಕ್ರಿಸ್ತನಲ್ಲಿ ನಾವು ಹೊಂದುವ ರಕ್ಷಣೆಯ ಭರವಸವನ್ನು ಒತ್ತಿ ಹೇಳಿರಿ. 1 ಯೋಹಾ. 5:10–13 ನಿಮ್ಮ ಕೇಳುಗರನ್ನು ಕ್ರಿಸ್ತನನ್ನು ಸ್ವೀಕರಿಸುವ ತೀರ್ಮಾನದ ಹಂತಕ್ಕೆ ತರಬೇಕು. ಗಟ್ಟಿಯಾದ ಸ್ವರದಲ್ಲಿ ಪಾಪಿಯ ಪ್ರಾರ್ಥನೆಯನ್ನು ಪ್ರಾರ್ಥಿಸಲು ಅವರನ್ನು ಆಹ್ವಾನಿಸಬೇಕು.

10) **ಆ ಸ್ತ್ರೀಯು ಉತ್ತೇಜಿತಳಾದಳು ಮತ್ತು ತಕ್ಷಣವೇ ಧರ್ಮಪ್ರಚಾರಕಳಾದಳು** (4:28–30). ನಿಮ್ಮ ವಿಶ್ವಾಸಿಗಳು ಮನ ಪರಿವರ್ತನೆ ಹೊಂದಿದ ಕೂಡಲೇ ಸಾಕ್ಷೀಕರಿಸಲು ಮತ್ತು ಕ್ರಿಸ್ತನ ಬಗ್ಗೆ ಹೇಳಲು ತರಬೇತಿಗೊಳಿಸಬೇಕು. ಶಿಷ್ಯತ್ವದಲ್ಲಿ ಮುಂದುವರಿಸಬೇಕು (2 ತಿಮೊ. 2:2).

ಕರ್ತನು ತಾನೇ ನಿಮ್ಮನ್ನು ಚೀಯೋನಿನಿಂದ
ಹೇರಳವಾಗಿ ಆಶೀರ್ವದಿಸಲಿ ಆಮೆನ್.

ಯೆಹೋವನಾದರೋ ತನ್ನಲ್ಲಿ ಭಯಭಕ್ತಿವುಳ್ಳವರನ್ನು ಕಟಾಕ್ಷಿಸುತ್ತಾನೆ.
(ಕೀರ್ತ 33:18).

# ತಿಳುವಳಿಕೆಯ ಸ್ವರ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುತ್ತೇವೆಯೇ?

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪವಿತ್ರಾತ್ಮನು, ಕ್ರೈಸ್ತರ ಜೀವಿತದಲ್ಲಿ ಯಾವ ರೀತಿಯಿಂದಾದರೂ ತನ್ನ ಕಾರ್ಯವನ್ನು ಮಾಡಿದರೂ ಕೂಡ ಆ ಕಾರ್ಯಕ್ಕಾಗಿ ನಾವು ದೇವರನ್ನು ಕೊಂಡಾಡಬೇಕು ಮತ್ತು ಕೃತಜ್ಞತೆಯನ್ನು ಸಲ್ಲಿಸಬೇಕು.

ಸಭೆಗಳಲ್ಲಿ ಪವಿತ್ರಾತ್ಮನ ಶಕ್ತಿ

ಯೇಸು ಕ್ರಿಸ್ತನನ್ನು ವಿಶ್ವಾಸಿಸುವ ಪ್ರತಿಯೊಬ್ಬನಲ್ಲಿಯೂ ಪವಿತ್ರಾತ್ಮನು ಇರುತ್ತಾನೆಂದು ಎಲ್ಲಾ ಕ್ರೈಸ್ತರು ನಂಬುತ್ತಾರೆ (ರೋಮ. 8:9, ಎಫೆ. 4:30). ನೀರಿನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವಾಗ ಮತ್ತು ರಾತ್ರಿ ಭೋಜನವನ್ನು ತೆಗೆದುಕೊಳ್ಳುವಾಗ, ವಿಶೇಷವಾದ ರೀತಿಯಲ್ಲಿ ಪವಿತ್ರಾತ್ಮನನ್ನು ಪಡೆದುಕೊಳ್ಳುತ್ತೇವೆಂದು ಅನೇಕ ಕ್ರೈಸ್ತರು ನಂಬುತ್ತಾರೆ (1 ಕೊರಿ. 10:2–4, 12:13, ತೀತ. 3:5).

ಇನ್ನು ಕೆಲವರು ವಿಶೇಷ ಸೇವೆಗಾಗಿ, ವಿಶೇಷ ರೀತಿಯಲ್ಲಿ ಪವಿತ್ರಾತ್ಮನನ್ನು ಪಡೆದುಕೊಳ್ಳಬಹುದೆಂದು ಹೇಗೆಂದರೆ ಬೋಧಕರ, ಡೀಕನ್ನರ ಅಥವಾ ಧರ್ಮ ಬೋಧಕರ ನೇಮಕದಲ್ಲಿ ಎಂದು ನಂಬುತ್ತಾರೆ. ಅ.ಕೃ. 6:6, 13:2–3, 1 ತಿಮೊ. 4:14, 2 ತಿಮೊ. 1:6 ಅಥವಾ ಪದೇ ಪದೇ ಬೇಕಾಗುವ ಶಕ್ತಿ ಮತ್ತು ಪ್ರೋತ್ಸಾಹಕ್ಕಾಗಿಯೂ ಸಹ ಪಡೆದುಕೊಳ್ಳಬಹುದೆಂದು ನಂಬುತ್ತಾರೆ (ಅ.ಕೃ. 4:31).

ಆದಿಸಭೆಯಲ್ಲಿ ಕ್ರೈಸ್ತ, ಸಭಾ ಹಿರಿಯರು ಕ್ರೈಸ್ತರ ಮೇಲೆ ತಮ್ಮ ಕೈಗಳನ್ನು ಇಟ್ಟಾಗ, ವಿಶೇಷ ರೀತಿಯಲ್ಲಿ ಪವಿತ್ರಾತ್ಮ ವರ ಬಂತು. ಇದು ಅ.ಕೃ. 8:14–17 ರಲ್ಲಿ ವಿವರಿಸಿರುವ ಸನ್ನಿವೇಶದಂತೆಯೇ ಎಂದು ನಂಬುತ್ತಾರೆ. ಆದಿ ಸಭೆಯ ಈ ಅನುಭವವು ಮಾನಸಾಂತರಪಡುವಿಕೆ ಮತ್ತು ನೀರಿನಿಂದ ಸ್ನಾನ ಇವುಗಳಿಂದ ಪ್ರತ್ಯೇಕವಾದದ್ದು ಎಂದು ನಂಬುತ್ತಾರೆ. ಸಭಾಚರಿತ್ರೆಯನ್ನು ನೋಡಿದಾಗ ಈ ನಂಬಿಕೆಯೇ, ಸುಮಾರು ಶತಮಾನಗಳವರೆಗೆ ಪ್ರಚಲಿತವಾಗಿತ್ತು ಎಂದು ಕಂಡುಬರುತ್ತದೆ.

ಆದಾಗ್ಯೂ ತದನಂತರದ ಸಭಾ ಚರಿತ್ರೆಯುದ್ದಕ್ಕೂ ಅನೇಕ ಕ್ರೈಸ್ತರು ತಮ್ಮಲ್ಲಿನ ಪವಿತ್ರಾತ್ಮನ ಯಾವ ವಿಶೇಷ ವರ ಅಥವಾ ಶಕ್ತಿಯನ್ನು ಪ್ರದರ್ಶಿಸಲಿಲ್ಲ. ಇದು 1 ಕೊರಿ. 12:7–11ರಲ್ಲಿ ಕಾಣಬರುತ್ತದೆ. ಉದಾ, ಅನೇಕ ಜನರು ಯಾರನ್ನಾದರೂ ದೈವೀಕ ಶಕ್ತಿ ಹೊಂದಿಕೊಂಡು ಸ್ವಸ್ಥಪಡಿಸಿದ್ದನ್ನು ನೋಡಿಲ್ಲ. ಆದಿಸಭೆಗೆ ದೇವರು ವಿಶೇಷವಾದ ವರ ಮತ್ತು ಶಕ್ತಿಯನ್ನು ಕೊಟ್ಟಿದ್ದಾನೆ ಎಂದು ಅನೇಕರು ತಿಳಿದುಕೊಂಡಿದ್ದರು. ಈ ದಿನಗಳಲ್ಲಿ ಅನೇಕ ಕ್ರೈಸ್ತರು ವಿಶೇಷ ವರಗಳು ಯಾರಿಗೂ ಲಭ್ಯವಿರುವುದಿಲ್ಲ ಎಂದು ನಂಬುತ್ತಾರೆ. ಪರಿಪೂರ್ಣತೆಯನ್ನು ಮುಟ್ಟಿದಾಗ, ಪ್ರವಾದನೆಗಳು ಹಾಗೂ ಅನ್ಯಭಾಷೆಗಳಲ್ಲಿ ಮಾತನಾಡುವುದು ಮತ್ತು ಜ್ಞಾನ, ಇವುಗಳು 1 ಕೊರಿ. 13:8–10ರಲ್ಲಿ ತಿಳಿಸಿರುವ ಪ್ರಕಾರ, ನಿಂತು ಹೋಗುತ್ತವೆ ಎಂದು ಪೌಲನು ಹೇಳುತ್ತಾನೆ. ಈ ಕ್ರೈಸ್ತರು ಪರಿಪೂರ್ಣತೆಯ ಬಗ್ಗೆ ಕ್ರಿಸ್ತನು ಸತ್ತ ನೂರು ವರ್ಷದ ನಂತರ ಹೊಸ ಒಡಂಬಡಿಕೆಯಲ್ಲಿ ಬರೆಯಲಾಯಿತು ಎಂದು ಭಾವಿಸುತ್ತಾರೆ.

ಆದರೆ ಇನ್ನು ಕೆಲವು ಕ್ರೈಸ್ತರು, ಎಲ್ಲಾ ವರಗಳು ನಮಗೆ ಇನ್ನು ಲಭ್ಯವಿದೆ ಮತ್ತು ಇನ್ನೂ ಹೆಚ್ಚಾಗಿ, ಇದನ್ನು ಇವರು ಅನುಭವಿಸಿದ್ದಾರೆ ಎಂದು ಸಾಧಿಸುತ್ತಾರೆ. ಇವರು ನಂಬುವುದೇನೆಂದರೆ, 1 ಕೊರಿ. 13:8–10ರಲ್ಲಿ ಪೌಲನು ಭವಿಷ್ಯತ್ಕಾಲದಲ್ಲಿ ಕ್ರಿಸ್ತನನ್ನು ನಾವು ಮುಖಾಮುಖಿಯಾಗಿ ಕಾಣುವ ಸಮಯದಲ್ಲಿ ಸೂಚಿಸಿದ್ದಾನೆ ಎಂದು ಹೇಳುತ್ತಾರೆ 1ನೇ ಕೊರಿಂಥ 13:12. ಸಭೆಯ ಚರಿತ್ರೆಯುದ್ದಕ್ಕೂ ಪವಿತ್ರಾತ್ಮನ ಶಕ್ತಿ ಮತ್ತು ವರಗಳು, ಕಾಲ ಕಾಲಕ್ಕೆ ಮತ್ತು ವಿವಿಧ ಸ್ಥಳಗಳಲ್ಲಿ ಕಂಡು ಬಂದುದನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ನಿಜವಾಗಿಯೂ 20ನೇ ಶತಮಾನದ ಪ್ರಾರಂಭದಿಂದಲೂ, ಆತ್ಮನ ಶಕ್ತಿ ಮತ್ತು ಬಲವು ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿರುವುದನ್ನು ನೋಡಬಹುದು. ಈ ಕ್ರೈಸ್ತರು ಮಾರ್ಕ. 16:17–18, ಯೋಹಾನ. 14:12 ಅ. ಕೃ. 2:17–18ರಲ್ಲಿ ವಾಗ್ದಾನ ಮಾಡಿರುವ ವಿಶೇಷ ಸೂಚಕ ಕಾರ್ಯಗಳು ಮತ್ತು ವರಗಳು ವಿಶ್ವಾಸಿಗಳಿಗೆ ಕೊಡಲ್ಪಟ್ಟಿರುವುದನ್ನು ಎತ್ತಿ ತೋರಿಸುತ್ತಾರೆ.

ನಾವು ಹೇಗೆ ಮತ್ತು ಯಾವಾಗ ಈ ಶಕ್ತಿಯನ್ನು ಪಡೆಯಬಹುದು?

ಪವಿತ್ರಾತ್ಮನ ಶಕ್ತಿ ಮತ್ತು ವರಗಳು ಈ ದಿನಗಳಲ್ಲಿ ಸಭೆಗಳಿಗೆ ಲಭ್ಯವಾಗುತ್ತವೆ ಎಂದು ನಂಬುವವರಲ್ಲಿ ಶಕ್ತಿ ಮತ್ತು ವರಗಳು ಹೇಗೆ ಮತ್ತು ಯಾವಾಗ ಪಡೆಯಲಾಯಿತು ಎಂಬುದರ ಬಗ್ಗೆ ಬೇರೆ ಬೇರೆಯಾದ, ಅಭಿಪ್ರಾಯ ಹೊಂದಿರುವರು. ಅ.ಕೃ. 10:44ರ ಪ್ರಕಾರ ಎಲ್ಲಾ ವಿಶ್ವಾಸಿಗಳು ಮಾನಸಾಂತರಪಟ್ಟಾಗ ಪವಿತ್ರಾತ್ಮ ಅಭಿಷೇಕವನ್ನು ಹೊಂದಿದರಾದರೂ, ಪವಿತ್ರಾತ್ಮನ ವರಗಳು ಒಬ್ಬ ವಿಶ್ವಾಸಿಯ

ಜೀವಿತದಲ್ಲಿ ಅನೇಕ ವರ್ಷಗಳ ನಂತರ ಕಾಣಿಸಿಕೊಳ್ಳಲು ಪ್ರಾರಂಭಿಸಬಹುದು ಎಂದು ಕಂಡುಬರುತ್ತದೆ ಎಂದು ಅನೇಕರು ವಿಶ್ವಾಸಿಸುತ್ತಾರೆ. ಎರಡನೇ ಗುಂಪಿನ ಕ್ರೈಸ್ತರು ಪವಿತ್ರಾತ್ಮನ ದೀಕ್ಷಾಸ್ನಾನವೂ, ನೀರಿನ ದೀಕ್ಷಾಸ್ನಾನದ ಸಮಯದಲ್ಲಿ ಬರುತ್ತದೆಂದೂ, ಮತ್ತಾ. :16–17ರಲ್ಲಿ ಬರೆದಿರುವ ಯೇಸುಕ್ರಿಸ್ತನ ನೀರಿನ ಸ್ನಾನಕ್ಕೂ ಅ. ಕೃ. 19:5–6 ದೀಕ್ಷಾಸ್ನಾನದ ಬಗ್ಗೆ ಬೆರಳು ತೋರಿಸುತ್ತಾರೆ ಯಾಕಂದರೆ , ಪವಿತ್ರಾತ್ಮವು ನೀರಿನಿಂದ ಸ್ನಾನಮಾಡಿದ ಕೂಡಲೇ ಯೇಸುವಿಗೆ ಬಂತು. ಆದರೆ ಸಾಧಾರಣವಾಗಿ ಈ ಎರಡೂ ಗುಂಪಿನವರೂ, ಮಾನಸಾಂತರಪಟ್ಟಾಗ ಅಥವಾ ನೀರಿನಿಂದ ದೀಕ್ಷಾಸ್ನಾನ ಹೊಂದುವಾಗ ಬರುವ ಪವಿತ್ರಾತ್ಮನ ಶಕ್ತಿಯನ್ನು ವಿಶ್ವಾಸಿಸುತ್ತಾ, ಅ.ಕೃ. ದಲ್ಲಿ ತೋರಿಸಿರುವ ಪವಿತ್ರಾತ್ಮನ ಇಳಿಯುವಿಕೆಯೂ ಒಂದು ಅಸಾಧಾರಣ ಕ್ರಿಯೆಯಾಗಿತ್ತು ಎಂದು ನಂಬುತ್ತಾರೆ.

ಬಲ ಮತ್ತು ಶಕ್ತಿಯು ಆದಿಕಾಲದಲ್ಲಿ ದೊರಕಿದ್ದು ಬಹಳ ಕಾಲದವರೆಗೂ ಕಾಣದೆ ಹೋಗುವ ಸಂದರ್ಭಗಳಲ್ಲಿ ನಾವು ದೇವರಿಗೆ ಮೊರೆಯಿಟ್ಟು ಅದನು ನಮ್ಮ ಜೀವಿತದಲ್ಲಿ ತೋರಿ ಬರುವಂತೆ ಮಾಡು ಎಂದು ಕೇಳಿ ಕೊಳ್ಳಬಹುದಾಗಿದೆ ಎಂದು ವಿಶ್ವಾಸಿಸುತ್ತಾರೆ. ಮೂರನೇ ಗುಂಪಿನವರು. ಅ.ಕೃ.ದಲ್ಲಿ ಹೇಳಿರುವ ವಚನಗಳಲ್ಲಿ ಶಕ್ತಿ ಮತ್ತು ಬಲವನ್ನು ಯಾವಾಗಲಾದರೂ ಪಡೆದುಕೊಳ್ಳಬಹುದು. ಆದರೆ ಸರ್ವೇ ಸಾಧಾರಣವಾಗಿ ಅವು ಮಾನಸಾಂತರ ಮತ್ತು ನೀರಿನಿಂದ ಸ್ನಾನದ ಸಮಯ ಬಿಟ್ಟು ಬೇರೆ ವೇಳೆಯಲ್ಲಿ ಬರಬಹುದೆಂದು ನಂಬುತ್ತಾರೆ. ಅ.ಕೃ. 2:4, 8:17, 1ನೇ ತಿಮೊಥೆ. 4:14, 2ನೇ ತಿಮೊ. 1:6 ಪ್ರಕಾರ ಇವರು ಪವಿತ್ರಾತ್ಮನ ಶಕ್ತಿಗಾಗಿ, ಯಾರಾದರೂ, ಪ್ರಾರ್ಥಿಸಿ ಕೇಳಿಕೊಂಡಾಗ ಇದು ಅವರಿಗೆ ಬರುತ್ತದೆಂದು ಇವರು ನಂಬುತ್ತಾರೆ. ಕೇಳಿಕೊಳ್ಳುವವರೆಲ್ಲರಿಗೂ ಇದು ದೊರಕುತ್ತದೆ ಎಂದು ಹೇಳುವರು. ಈ ಶಕ್ತಿಯನ್ನು ಪಡೆಯಬೇಕಾದರೆ, ಸಭೆಯ ಹಿರಿಯರನ್ನು ತಮ್ಮ ಮೇಲೆ ಹಸ್ತವಿಟ್ಟು ಪ್ರಾರ್ಥಿಸಿರಿ ಎಂದು ಕೇಳುವುದು ಸಹಾಯಕವಾಗಬಹುದುದೆಂದು ಕೂಡ ಇವರು ವಿಶ್ವಾಸಿಸುತ್ತಾರೆ (ಅ.ಕೃ. 8:17,19:)

ಮುಂದುವರಿಯುವದು.......

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ಜ್ಞಾನಕ್ಕಾಗಿಪ್ರಶ್ನೆಗಳು : ನಮ್ಮ ಪ್ರಶ್ನೆ ನಿಮ್ಮ ಉತ್ತರ

1. ವಿಶ್ವಸಂಸ್ಥೆಯು ಸಂಸ್ಥಾಪನೆಯಾದ ವರ್ಷ ಯಾವುದು?
2. ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ ಯಾರು?
3. ಅಂಬೇಡ್ಕರ್‌ರವರು ಭಾರತ ಸಂವಿಧಾನದ ಯಾವ ವಿಧಿನಿಯಮವನ್ನು ಅದರ ಆತ್ಮ ಹಾಗೂ ಹೃದಯದಂತಿದೆ ಎಂದು ವಿವರಿಸಿದ್ದಾರೆ?
4. ಭಾರತದ ದಕ್ಷಿಣ ತುದಿ ಯಾವುದು?
5. ಅಯೋಡಿನ ಕೊರತೆಯಿಂದ ಉಂಟಾಗುವ ಅಸ್ವಾಸ್ಥ್ಯ ಯಾವುದು?
6. ಕರ್ನಾಟಕದಲ್ಲಿ ಭೂಕಂಪಮಾಪನ ಕೇಂದ್ರ ಎಲ್ಲಿದೆ?
7. ಒಂದು ಹಸಿರು ಹೂವನ್ನು ಕೆಂಪು ಗಾಜಿನ ಮೂಲಕ ನೋಡಿದಾಗ ಯಾವ ಬಣ್ಣದಲ್ಲಿ ಕಾಣಿಸುತ್ತದೆ?
8. ಹಿಮದಲ್ಲಿ ಜೀವಿಸುವ ಪಕ್ಷಿ ಯಾವುದು?
9. ಹಾಲಿಯ ಧೂಮಕೇತು ಪ್ರತ್ಯಕ್ಷ ಪಡುವುದು ಎಷ್ಟು ವರ್ಷ ತುಂಬುವಾಗ?
10. ಮೊಟ್ಟೆಯಿಡುವ ಮೀನಿನ ಹೆಸರು ಯಾವುದು?

**ಜನವರಿ ತಿಂಗಳ ಜ್ಞಾನಕ್ಕಾಗಿ ಪ್ರಶ್ನೆಗಳು ಇದರ ಸರಿ ಉತ್ತರಗಳು:**

1) ಕೈರೋ, 2) ಶಿವಮೊಗ್ಗ, 3) ದಿ ಟೆಂಪೆಸ್ಟ್, 4) ಗ್ರಹಾಂಬೆಲ್, 5) ಅಮೇರಿಕಾ, 6) ಪಶ್ಚಿಮ ಬಂಗಾಳ, 7) 13 ಪ್ರಭೇದಗಳು, 8) ಇಂಡಿಯಾ 9) ಸಾಮುವೇಲ್ ಜೋನ್ಸನ್ 10) ಜುಂಕೊ ತಾಬೇ.

ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು (ಹಬ. 3:18).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಂಬಿದ ಮಂಡಲಿಯುವರು (ಇವರು ನಂಬದ ಮಂಡಲಿಯವರಲ್ಲ ನಂಬಿದ ಮಂಡಲಿಯವರು. ನಾವು ರಕ್ಷಣೆ ಹೊಂದಿದ ಮೇಲೆ ನಂಬದ ಮಂಡಲಿಯವರೊಂದಿಗೆ ಸೇರಿ ಆರಾಧಿಸಬಾರದು, ನಂಬಿದ ಮಂಡಲಿಯವರೊಂದಿಗೆ ಸೇರಿ ಆರಾಧಿಸಬೇಕು). **"ನಂಬಿದ್ದ ಮಂಡಲಿಯವರ ಹೃದಯವೂ ಪ್ರಾಣವೂ ಒಂದೇ ಆಗಿತ್ತು"** (ಅ.ಕೃ. 4:32). ರಕ್ಷಣೆ ಹೊಂದಿದವರನ್ನು ರಕ್ಷಣೆ ಹೊಂದದವರು ನಡೆಸಬಾರದು.

5) ನಿಕೊದೇಮನು ಹೊಸದಾಗಿ ಹುಟ್ಟದೆ ಹೊಸದಾಗಿ ಹುಟ್ಟಿದವರನ್ನು ನಡೆಸಲು ಸಾಧ್ಯವಿಲ್ಲ (ಯೋಹಾ. 3:1–5): ಸಂಪ್ರದಾಯದ ಸಭೆಗೂ ಆತ್ಮೀಕ ಸಭೆಗೂ ಇರುವ ವ್ಯತ್ಯಾಸ. ಇಲ್ಲಿ ನಾನು ನನ್ನ ವೈಯಕ್ತಿಕ ಅನುಭವವನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಹುಟ್ಟಿ ಬೆಳೆದದ್ದು ಒಂದು ರೋಮನ್ ಕ್ಯಾಥೋಲಿಕ್ ಕುಟುಂಬದಲ್ಲಿ ನನಗೆ ಜ್ಞಾನ ಬರುವ ಸಂದರ್ಭದಲ್ಲಿ ದೇವರ ವಾಕ್ಯ, ಅದರ ಮಹತ್ವ ತಿಳಿಸಲ್ಪಡಲಿಲ್ಲ. ಅದಕ್ಕೆ ಬದಲಾಗಿ ಚರ್ಚಿಗೆ ಸಂಬಂಧಪಟ್ಟ ಒಂದು ಚಿಕ್ಕ ಪುಸ್ತಕ ಪರಿಚಯಿಸಲಾಯಿತು. (ಚಾಲ್ತಿ ಮಾಗ್ಣಿ) ಎಂದು ಅದರ ಹೆಸರು. ಸತ್ಯವೇದವನ್ನು ಓದಿ ಅಭ್ಯಾಸಮಾಡುವ ಬದಲು ಅದನ್ನು ಓದಿ ಅಭ್ಯಾಸ ಮಾಡಬೇಕಾಗಿತ್ತು. ಆ ಪುಸ್ತಕದಲ್ಲಿ ಹತ್ತು ಆಜ್ಞೆಗಳು, ಸಭೆಯ ಕಟ್ಟಳೆಗಳು, ಸಭೆಯ ಏಳು ಸಂಸ್ಕಾರಗಳು, ಜಪಸರ ಪ್ರಾರ್ಥನೆ, ಸಭೆಯ ಮೇಲಿನ ನಂಬಿಕೆಯ ಪ್ರಾರ್ಥನೆ ಇವುಗಳು ಒಳಗೊಂಡಿತ್ತು. ಆ ಸಮಯದಲ್ಲಿ ಇವೆಲ್ಲವುಗಳನ್ನು ಕೈಗೊಳ್ಳುವ ಮುಖಾಂತರ ರಕ್ಷಣೆ ಎಂದು ತಿಳಿದುಕೊಂಡಿದ್ದೆ ಮತ್ತೆ ನಮ್ಮ ಪಾಪಗಳನ್ನು ದೇವರಿಗೆ ನೇರವಾಗಿ ಹೇಳದೆ ಯಾಜಕರಿಗೆ ಹೇಳಬೇಕಾಗಿತ್ತು. **"ಅದಕ್ಕೆ ಆತನು ಕಪಟಿಗಳಾದ ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನಂದರೆ ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೇ ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು ಹೇಳಿದನು"** (ಮಾರ್ಕ. 7:6–8). ಈ ಹೊತ್ತು ನಾವು ತೀರ್ಮಾನಿಸಿಕೊಳ್ಳಬೇಕು. ಮನುಷ್ಯ ಕಲ್ಪಿತ ಸಭೆಯ ಕಟ್ಟಳೆಗಳು ಮುಖ್ಯವೋ? ದೇವರ ವಾಕ್ಯ ಮುಖ್ಯವೋ? ಅ.ಕೃ. 17:11 ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವು ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು. ನಮ್ಮ ನಂಬಿಕೆಯನ್ನು ದೇವರ ಮೇಲೆ ಇಡಬೇಕು. ಬೋಧಕರು ಎಷ್ಟೇ ಬೋಧನೆ ಮಾಡಿದರೂ ದೇವರ ವಾಕ್ಯದ ಆಧಾರದ ಮೇಲಿರುವ ಬೋಧನೆಗಳನ್ನು ನಂಬಬೇಕು. ನಮ್ಮ ನಂಬಿಕೆ ಬೋಧಕರ ಮೇಲಲ್ಲ, ಮತದ ಮೇಲು ಅಲ್ಲ, ಹಿರಿಯರು ಕಲಿಸಿಕೊಟ್ಟ ವ್ಯರ್ಥ ನಡವಳಿಕೆಗಳ ಮೇಲೆ ಅಲ್ಲ. ನಂಬಿಕೆಯನ್ನು ದೇವರ ವಾಕ್ಯದ ಮೇಲೆ ಇಡಬೇಕು (1 ಪೇತ್ರ. 1:18–19).

6) ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಲಾದ್ರು, ಪೇದ್ರು, ತೋಮ್ ಎಂದು ಹೆಸರಿಟ್ಟು ಕೊರಳಿಗೆ ಶಿಲುಬೆಯನ್ನು ಹಾಕಿದ ಕೂಡಲೆ ಯಾರು ಪರಲೋಕಕ್ಕೆ ಹೋಗಲು ಸಾಧ್ಯವಿಲ್ಲ. ಹಾಗಾದರೆ ಯೇಸು ಕ್ರಿಸ್ತನು ಈ ಲೋಕಕ್ಕೆ ಬರುವ ಅವಶ್ಯಕತೆ ಇರಲಿಲ್ಲ. ಅ.ಕೃ. 11:14ರಲ್ಲಿ ಕೊರ್ನೇಲ್ಯನು ಮತ್ತು ಅವನ ಮನೆಯವರು ವಾಕ್ಯವನ್ನು ಕೇಳಿ, ನಂಬಿ ಅಂಗೀಕರಿಸಿ ರಕ್ಷಣೆ ಹೊಂದಿದರು. ಅ.ಕೃ. 16:31–34 ರಲ್ಲಿ ಫಿಲಿಪ್ಪಿಯ ಸೆರೆಮನೆ ಅಧಿಕಾರಿಯು ಪಾಪಕ್ಕೆ ಪಶ್ಚಾತ್ತಾಪಪಟ್ಟು ಯೇಸುವನ್ನು ನಂಬಿ ತಂದೆ, ಮಗ, ಪರಿಶುದ್ಧಾತ್ಮ ನಾಮದಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಂಡು ರಕ್ಷಣೆ ಹೊಂದಿದರು.

**ರಕ್ಷಣೆಯು ಹೇಗೆ ಸಿಗುತ್ತದೆ**

* ಕೃಪೆ (ಎಫೆ. 2:8).
* ಯೇಸುವಿನ ಹೆಸರು (ಅ.ಕೃ. 4:8).
* ದೇವರ ವಾಕ್ಯ (2 ತಿಮೊ. 3:15).
* ಮಾನಸಾಂತರ (2 ಕೊರಿ. 4:10).
* ಕ್ಷಮೆ ಯಾಚಿಸುವದು (ಲೂಕ. 19:1–10, ಅ.ಕೃ. 16:31).
* ಯೇಸುಕ್ರಿಸ್ತನು ರಕ್ಷಕನು ಎಂದು ನಂಬಿ ಅಂಗೀಕರಿಸುವುದು (ಯೋಹಾ. 1:12–13, ರೋಮ. 10:9–10).
* ಮತ್ತಾ. 24:13, ಮಾರ್ಕ. 13:10 ನಂಬಿಕೆಯಲ್ಲಿ ಕೊನೆಯವರೆಗೂ ಸ್ಥಿರವಾಗಿ ನಿಲ್ಲುವುದು (ಯೂದ. 1:3, 2 ತಿಮೊ. 4:7–8).

ಮುಂದುವರಿಯುವದು.....

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ಆತನು ನನ್ನ ಕಾಲನ್ನು ಜಿಂಕೆಯ ಕಾಲಿನಂತೆ ಚುರುಕುಮಾಡಿ ನನ್ನ ಉನ್ನತಪ್ರದೇಶಗಳಲ್ಲಿ ನನ್ನನ್ನು ನಡಿಸುತ್ತಾನೆ (ಹಬ. 3:19).

# ದೇವದರ್ಶನ ಗುಡಾರವೂ ಅಂಗಳವೂ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ಅಂಗಳದ ಬಾಗಿಲು :** (ವಿ.ಕಾ 27:13–16; 38:18–20). ಅಂಗಳದ ಒಳಗೆ ಪ್ರವೇಶಿಸಲು ಕೇವಲ ಒಂದೇ ಒಂದು ಬಾಗಿಲಿತ್ತು. ಆ ಬಾಗಿಲು ಪೂರ್ವದಿಕ್ಕಿಗೆ ಅಭಿಮುಖವಾಗಿತ್ತು. ಅಂಗಳದ ಪೂರ್ವ ಭಾಗದ ಒಟ್ಟು ವಿಸ್ತೀರ್ಣವು ಐವತ್ತು ಮೊಳವಾಗಿತ್ತು. ಅದರಲ್ಲಿ ಇಪ್ಪತ್ತು ಮೊಳ ಬಾಗಿಲಾಗಿತ್ತು. ತಾಮ್ರದ ಬುಡಗಳುಳ್ಳ ನಾಲ್ಕು ಜಾಲೀಮರದ ಕಂಬಗಳಲ್ಲಿ ಬಾಗಿಲಿನ ತೆರೆಯನ್ನು ತೂಗುಹಾಕಲಾಗಿತ್ತು. ಇಪ್ಪತ್ತು ಮೊಳ ಅಗಲದ ಮತ್ತು ಐದು ಮೊಳ ಎತ್ತರದ ತೆರೆಯು ನೀಲಿದಾರ, ಧೂಮ್ರದಾರ, ರಕ್ತವರ್ಣದಾರ ಮತ್ತು ಹುರಿನಾರಿನಿಂದ ಮಾಡಲಾಗಿತ್ತು. ಬಾಗಿಲು ಪೂರ್ವ ದಿಕ್ಕಿನ ಮಧ್ಯಭಾಗದಲ್ಲಿತ್ತು. ಬಾಗಿಲಿನ ಇಪ್ಪತ್ತು ಮೊಳ ಹೊರತುಪಡಿಸಿ ಪೂರ್ವದಿಕ್ಕಿನ ಉಳಿದ ಮೂವತ್ತು ಮೊಳವು ಬಾಗಿಲಿನ ಇಕ್ಕಡೆಗಳಲ್ಲಿ ಮೂರರಂತೆ ಆರು ಕಂಬಗಳಲ್ಲಿ ಐದು ಮೊಳ ವಿಸ್ತೀರ್ಣದ ಬಿಳಿ ತೆರೆಯನ್ನು ಹಾಕಲಾಗಿತ್ತು.

ಈ ಬಾಗಿಲು ಸಾರಿ ಹೇಳುವ ಆತ್ಮೀಕ ಸತ್ಯಗಳು–

1) **ಏಕೈಕ ಬಾಗಿಲು :** ಅಂಗಳದ ಒಳಗೆ ಪ್ರವೇಶಿಸಲು ದೇವರು ಕೇವಲ ಒಂದೇ ಬಾಗಿಲನ್ನು ಇಟ್ಟಿರುವುದು ಒಬ್ಬ ವ್ಯಕ್ತಿಗೆ ಪರಲೋಕಕ್ಕೆ ಪ್ರವೇಶಿಸಲು ಯೇಸುಕ್ರಿಸ್ತನೆಂಬ ಒಂದೇ ಬಾಗಿಲಿನ ಮೂಲಕ ಮಾತ್ರ ಸಾಧ್ಯವೆಂದು ತೋರಿಸುವದಕ್ಕಾಗಿತ್ತು. ಪ್ರತಿ ದಿಕ್ಕಿಗೆ ಒಂದೊಂದು ಬಾಗಿಲನ್ನು ಇಟ್ಟಿದ್ದರೆ ಜನರಿಗೆ ಸುತ್ತಿಬಳಸಿ ಬರುವುದನ್ನು ತಪ್ಪಿಸಬಹುದಿತ್ತು. ಸಾಧಾರಣ ಸಣ್ಣ ಮನೆಗಳಿಗೇ ಒಂದಕ್ಕಿಂತ ಹೆಚ್ಚು ಬಾಗಿಲುಗಳನ್ನಿಡುವ ಈ ಕಾಲದಲ್ಲಿ ಇಷ್ಟು ವಿಶಾಲವಾದ ಈ ಅಂಗಳಕ್ಕೆ ಕೇವಲ ಒಂದೇ ಬಾಗಿಲನ್ನು ಇಟ್ಟಿರುವುದು ಅನೇಕರಲ್ಲಿ ಮುಜುಗುರವನ್ನು ಉಂಟುಮಾಡಬಹುದು. ಆದರೆ ಪರಲೋಕಕ್ಕೆ ಹೋಗಲು ಅನೇಕ ದಾರಿಗಳಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ನೋಹನು ಕಟ್ಟಿದ ನಾವೆಗೆ ಕೇವಲ ಒಂದೇ ಬಾಗಿಲಿತ್ತು (ಆ.ಕಾ 6:15). **"ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನೂ ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ"** (1 ತಿಮೊಥಿ 2:4).

2) **ಸುಂದರ ಬಾಗಿಲು :** ಈ ಬಾಗಿಲು ನೋಡಲು ಬಹು ಸುಂದರವಾಗಿತ್ತು. ನೀಲಿ, ಧೂಮ್ರ, ರಕ್ತವರ್ಣ ಮತ್ತು ಹುರಿನಾರಿನಿಂದ ಬುಟೇದಾರೀ ಕೆಲಸದವರ ಕೈಯಿಂದ ಮಾಡಲಾದ ಈ ಬಾಗಿಲು ಯೇಸುಕ್ರಿಸ್ತನಿಗೆ ಹೋಲಿಕೆಯಾಗಿದೆ. ಪರಮಗೀತೆಯಲ್ಲಿ ಸೊಲೊಮೋನನು ತನ್ನ ಪ್ರಿಯನ ಕುರಿತು ಹೇಳುವಾಗ **"ನನ್ನ ನಲ್ಲನು ಬಿಳುಪು ಕೆಂಪು ಬಣ್ಣವುಳ್ಳವನು; ಅವನು ಹತ್ತು ಸಾವಿರ ಜನರಲ್ಲಿ ಧ್ವಜ ಪ್ರಾಯನು"** (ಪ್ರಲಾ. 5:10). ನಾಲ್ಕು ದಾರಗಳಲ್ಲಿ ನೀಲಿ ಬಣ್ಣವು ಆಕಾಶದ ಬಣ್ಣವಾಗಿದೆ. ಯೇಸುಕ್ರಿಸ್ತನು ದೇವಕುಮಾರನೆಂದೂ ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿ ನಮ್ಮ ಬಳಿ ವಾಸಮಾಡಿದನೆಂದೂ ಅರ್ಥಮಾಡಬಹುದು. ನೀಲಿ ಬಣ್ಣವು ಯೇಸುಕ್ರಿಸ್ತನನ್ನು ದೇವಕುಮಾರನೆಂದು ವಿವರಿಸಿರುವ ಯೋಹಾನನ ಸುವಾರ್ತೆಗೆ ಹೋಲಿಸಬಹುದು. ಧೂಮ್ರವಸ್ತ್ರವನ್ನು ಸಾಮಾನ್ಯವಾಗಿ ಪ್ರಭುಗಳು ಅರಸರುಗಳು ಧರಿಸುತ್ತಾರೆ. ಧೂಮ್ರ ವರ್ಣವು ಯೇಸುಕ್ರಿಸ್ತನು ರಾಜಾಧಿರಾಜನೆಂದು ತಿಳಿಸುತ್ತದೆ. ಸುವಾರ್ತೆಗಳಲ್ಲಿ ಮತ್ತಾಯನು ತನ್ನ ಸುವಾರ್ತೆಯಲ್ಲಿ ಯೇಸುಕ್ರಿಸ್ತನನ್ನು ಯೆಹೂದ್ಯರ ರಾಜನೆಂದು ವರ್ಣಿಸಿದ್ದಾನೆ. ರಕ್ತವರ್ಣವು ಯೇಸುಕ್ರಿಸ್ತನ ರಕ್ತದ ಮೂಲಕವಿರುವ ವಿಮೋಚನೆಯನ್ನು ಸಾರಿಹೇಳುತ್ತದೆ. ನಮ್ಮನ್ನು ವಿಮೋಚಿಸುವದಕ್ಕಾಗಿ ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತವನ್ನು ಶಿಲುಬೆಯಲ್ಲಿ ಚೆಲ್ಲಿದನು. ಇದು ಕ್ರಿಸ್ತನ ದಾಸನರೂಪವನ್ನು ವ್ಯಕ್ತಪಡಿಸುವ ಮಾರ್ಕನ ಸುವಾರ್ತೆಗೆ ಹೋಲಿಸಬಹುದು. ಬೆಳ್ಳಗಿನ ಹುರಿನಾರು ಯೇಸುಕ್ರಿಸ್ತನು ಪರಿಶುದ್ಧನೂ ನೀತಿವಂತನೂ ಸಂಪೂರ್ಣನು ಎಂಬುದನ್ನು ತೋರಿಸುತ್ತದೆ. ಲೂಕನ ಸುವಾರ್ತೆಯಲ್ಲಿ ಯೇಸುಕ್ರಿಸ್ತನನ್ನು ಸಂಪೂರ್ಣ ಮನುಷ್ಯಕುಮಾರನಾಗಿ ಚಿತ್ರಿಸಲಾಗಿದೆ.

3) **ಸುಗಮ ಬಾಗಿಲು :** ಈ ಬಾಗಿಲಿಗೆ ಇತರೇ ಬಾಗಿಲುಗಳಂತೆ ದಾರಂದ ಮತ್ತು ಚಿಲಕಗಳಿರಲಿಲ್ಲ. ಬಾಗಿಲನ್ನು ಕಾಯಲು ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನಿಡಿದ ಕೆರೂಬಿಯರಾಗಲಿ ಇರಲಿಲ್ಲ. ಈ ಬಾಗಿಲು ಕೇವಲ ನಾಲ್ಕು ಕಂಬಗಳ ಮೇಲೆ ತೂಗುಹಾಕಿತ್ತು. ಅಂಗಳವನ್ನು ಪ್ರವೇಶಿಸುವ ಒಬ್ಬನು ಯಾವುದೇ ತಡೆಗಳಿಲ್ಲದೆ ಸೀದಾ ಒಳಗೆ ಪ್ರವೇಶಿಸಬಹುದಿತ್ತು. ದೇವರ ಸನ್ನಿಧಿಗೆ ಬರುವವನಿಗೆ ಯಾವುದೇ ಅಡೆತಡೆಗಳಿಲ್ಲದೆ ಸಮಯೋಚಿತವಾದ ಸಹಾಯವು ದೊರಕಲು ನಂಬಿಕೆಯ ಮೂಲಕ

ಇಸ್ರಾಯೇಲಿನ ಅರಸನಾದ ಯೆಹೋವನು ನಿನ್ನ ಮಧ್ಯದಲ್ಲಿದ್ದಾನೆ ಇನ್ನು ಕೇಡಿಗೆ ಅಂಜದಿರುವಿ (ಚೆಫ. 3:15).

ಪ್ರವೇಶಿಸಬುದೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

4) **ವಿಶಾಲವಾದ ಬಾಗಿಲು :** ಈ ಬಾಗಿಲು ಇಪ್ಪತ್ತು ಮೊಳ ಅಗಲವಾಗಿತ್ತು. ಅಂದರೆ ಮೂವತ್ತು ಅಡಿ ಅಗಲ. ಇಷ್ಟು ಅಗಲವಾಗಿದ್ದದರಿಂದ ಜನರಿಗೆ ಯಾವುದೇ ನೂಕುನುಗ್ಗಲಿಲ್ಲದೆ ಸರಾಗವಾಗಿ ಒಳಗೂ ಹೊರಗೂ ಹೋಗಬಹುದಿತ್ತು. ಶ್ರೀಮಂತನಾಗಲೀ ಬಡವನಾಗಲೀ ವಿದ್ಯಾವಂತನಾಗಲೀ ವಿದ್ಯಾಹೀನನಾಗಲೀ ವರ್ಣ ಜಾತಿ ವ್ಯತ್ಯಾಸವಿಲ್ಲದೆ, ಯಾವುದೇ ಹರಕೆ ತೀರ್ಥಯಾತ್ರೆ ಪುಣ್ಯಕ್ರಿಯೆಗಳಿಲ್ಲದೆ ಎಲ್ಲರಿಗೂ ಯೇಸುಕ್ರಿಸ್ತನ ಮೂಲಕ ಪರಲೋಕಕ್ಕೆ ಪ್ರವೇಶಿಸಬಹುದೆಂಬುದಕ್ಕೆ ಈ ಬಾಗಿಲು ನಿದರ್ಶನವಾಗಿತ್ತು. ಯೇಸುಕ್ರಿಸ್ತನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದಾನೆ.

ಬಾಗಿಲಿನ ನಾಲ್ಕು ಕಂಬಗಳು : ಇಪ್ಪತ್ತು ಮೊಳ ಅಗಲದ ಬಾಗಿಲಿನ ತೆರೆಗಳು ನಾಲ್ಕು ಕಂಬಗಳಲ್ಲಿ ತೂಗು ಹಾಕಲಾಗಿತ್ತು. ಈ ನಾಲ್ಕು ಕಂಬಗಳು ನಾಲ್ಕು ಸುವಾರ್ತೆಯನ್ನು ತೋರಿಸುತ್ತವೆ. ಮತ್ತಾಯ, ಮಾರ್ಕ, ಲೂಕ ಮತ್ತು ಯೊಹಾನನ ಸುವಾರ್ತೆಗಳ ಮೂಲಕವೇ ಯೇಸುಕ್ರಿಸ್ತನು ಯಾರೆಂದು ಲೋಕಕ್ಕೆ ತಿಳಿಸಿರುವುದು.

ಮುಂದುವರೆಯುವದು.......

**ಪಾ॥ ಸಜೀ ವರ್ಗೀಸ್.**

---

**ಆರೋಗ್ಯ ಸ್ವರ**

# ಮಜ್ಜಿಗೆ ದಿವ್ಯೌಷಧಿ

ಮಜ್ಜಿಗೆಯು ಆರೋಗ್ಯಕ್ಕೆ ಒಳ್ಳೆಯದು. ಅದನ್ನು ಸಾಧಾರಣ ಪೇಯವಾಗಿ ಕಾಣುವವರೇ ಹೆಚ್ಚು. ಆದರೆ ಆಯುರ್ವೇದದಲ್ಲಿ ಮಜ್ಜಿಗೆಯನ್ನು ಭೂಮಿಯ ಮೇಲಿನ ಅಮೃತವೆಂದು ಹೇಳಲಾಗಿದೆ. ಮೇಲ್ನೋಟಕ್ಕೆ ಮಜ್ಜಿಗೆ ಒಂದೇ ವಿಧವಾಗಿ ಕಂಡರೂ, ಅದರಲ್ಲಿ ನಾಲ್ಕು ವಿಧಗಳಿವೆ. 'ಘೋಲ' 'ಮಥಿತ' 'ತಕ್ರ' ಹಾಗೂ 'ಉದಧಿತ' ಎಂದು ಅವುಗಳನ್ನು ಹೆಸರಿಸಲಾಗುತ್ತದೆ.

ಸ್ವಲ್ಪವೂ ನೀರನ್ನು ಬೆರೆಸದೆ, ಬೆಣ್ಣೆಯನ್ನೂ ತೆಗೆಯದೆ ಮೊಸರನ್ನು ಕಡೆದು ದಪ್ಪದ್ರವವನ್ನಾಗಿ ಮಾಡಿ ಉಪಯೋಗಿಸುವ ಮಜ್ಜಿಗೆಯನ್ನು 'ಘೋಲ'ಎಂದು ಕರೆಯಲಾಗುತ್ತದೆ. ಈ ಮಜ್ಜಿಗೆ ವಾತ, ಪಿತ್ತ ನಾಶಕವಾಗಿದೆ. ಪೌಷ್ಟಿಕ ಹಾಗೂ ಶಕ್ತಿವರ್ಧಕವಾಗಿರುವ ಈ ಮಜ್ಜಿಗೆ ರುಚಿಕಾರಕವೂ ಹೌದು. ಇಂಗು ಮತ್ತು ಜೀರಿಗೆಯನ್ನು ಸೇರಿಸದ 'ಘೋಲ' ಮಜ್ಜಿಗೆ ಮೂಲವ್ಯಾಧಿ ಮತ್ತು ಅತಿಸಾರ ನಾಶಕವೂ ಹೌದು. ಕಫ, ವಾತವಿಕಾರ, ಮಲಮೂತ್ರಕ್ಕೆ ಸಂಬಂಧಿಸಿದ ರೋಗಗಳು ಹಾಗೂ ಅರುಚಿ ಮುಂತಾದವುಗಳಲ್ಲಿ ಘೋಲ ಮಜ್ಜಿಗೆ ದಿವ್ಯೌಷಧವಾಗಿ ಕೆಲಸ ಮಾಡುತ್ತದೆ.

ಮೊಸರಿಗೆ ನೀರು ಸೇರಿಸದೇ, ಅದನ್ನು ಕಡೆದು ಬೆಣ್ಣೆ ತೆಗೆದು ಉಪಯೋಗಿಸುವ ಮಜ್ಜಿಗೆ ಕಫ ನಾಶಕ. ಕೆಮ್ಮಿನಲ್ಲಿ ಕಫ ಕಟ್ಟುವುದನ್ನು ತಡೆಯುವ ಶಕ್ತಿ ಈ ಮಜ್ಜಿಗೆಗಿದೆ. ಇದು 'ಮಿಥಿತ'. ಅರ್ಧದಷ್ಟು ನೀರು ಬೆರೆಸಿದ ಮೊಸರನ್ನು ಕಡೆದು ಬೆಣ್ಣೆ ತೆಗೆದಾಗ 'ಉದಧಿತ' ಉದ್ಭವ. ಕಾಲುಭಾಗ ನೀರು ಸೇರಿಸಿದ ಮೊಸರಿಗೆ ಬೆಣ್ಣೆತೆಗೆದಾಗ 'ತಕ್ರ'ವೆಂದು ಕರೆಯಲ್ಪಡುವ ಮಜ್ಜಿಗೆ ಹೆಚ್ಚೇನನ್ನೂ ಮಾಡದಿದ್ದರೂ ಕಣ್ಣುಗಳನ್ನು ಸ್ವಚ್ಛವಾಗಿರಿಸುವ ಶಕ್ತಿ ಹೊಂದಿದೆ.

ಹಸು ಹಾಲಿನ ಮಜ್ಜಿಗೆ ಅನೇಕ ರೋಗಗಳಿಗೆ ರಾಮಬಾಣ. ತ್ರಿದೋಷ ನಾಶಕವಾಗಿರುವ ಈ ಮಜ್ಜಿಗೆ ಬುದ್ಧಿವರ್ಧಕವೂ ಹೌದು. ಮೂಲವ್ಯಾಧಿ, ಹೊಟ್ಟೆಯೊಳಗಿನ ಗಂಟು, ಅತಿಸಾರ, ಸಂಗ್ರಹಣೆ ಮತ್ತು ಹಳೆಯ ರೋಗಗಳನ್ನು ನಿರ್ಮೂಲ ಮಾಡಬಲ್ಲ ದಿವ್ಯಶಕ್ತಿಯನ್ನು ಈ ಮೊಸರು ಹೊಂದಿದೆ.

ತ್ವಚೆಯ ಅಂದ ಈ ಕಾಲದಲ್ಲಿ ಸ್ತ್ರೀಯರಿಗಷ್ಟೇ ಸೀಮಿತವಾದ ಸಂಗತಿಯಲ್ಲ, ಪುರುಷರು ತಮ್ಮ ತನುವರ್ಣದ ಬಗ್ಗೆ ಕಾಳಜಿ ವಹಿಸುವ ಕಾಲವಿದು. ನಿಮ್ಮ ಹಿಂಗ್ಯೆ ಮತ್ತು ಕೈಯ ಮೊಣಗಂಟುಗಳಲ್ಲಿ ತ್ವಚೆಯ ದಪ್ಪವಾಗಿ ಕಪ್ಪಾಗಿರುವುದನ್ನು ಗಮನಿಸಿರಬಹುದು. ಚಿಂತಿಸದಿರಿ. ಕಾಫಿ ಪುಡಿಯನ್ನು ನಿಂಬೆರಸದಲ್ಲಿ ದಪ್ಪಗೆ ಕಲಸಿ ಗಂಟುಗಳಿಗೆ ಹಚ್ಚಿ ಚೆನ್ನಾಗಿ ತಿಕ್ಕಿದರೆ ಕಪ್ಪು ಕಲೆ ಹೋಗುತ್ತದೆ. ಒಡೆದ ಹಿಮ್ಮಡಿಯನ್ನು ಹೀಗೇ ಶುಚಿಗೊಳಿಸಬಹುದು. ಉಗುರುಗಳು, ಕಾಲಿನ ಪಾದ, ಬೆರಳು ಹಾಗೂ ಮಣಿಗಂಟುಗಳನ್ನು ತಿಕ್ಕಿ, ಅಲ್ಲಿ ದಪ್ಪಗಟ್ಟಿದ ತ್ವಚೆ ನವೀನ ಪಡೆಯುವುದನ್ನು ಕಣ್ಣಾರೆ ಕಾಣಬಹುದು!

ದೀನದರಿದ್ರಜನವನ್ನು ನಿನ್ನಲ್ಲಿ ಉಳಿಸುವೆನು; ಅವರು ಯೆಹೋವನ ನಾಮವನ್ನು ಆಶ್ರಯಿಸಿಕೊಳ್ಳುವರು (ಚೆಫ. 3:12).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಫೆಬ್ರವರಿ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

**ನಮ್ಮ ವಿಳಾಸ :**

**ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,**
**ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115**
**ಕರ್ನಾಟಕ, ಭಾರತ.**
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :

**ಡಿಜಿಎಂ ಬೇತೇಲ್ ಕಛೇರಿ,**
**ವಿಶ್ವಾಸದ ಮನೆ, ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115,**
**ಕರ್ನಾಟಕ, ಭಾರತ.** Ph: (0820) 2589070, 2002781
E-mial: dgmofficial@gmail.com

# ಸ್ಥಳೀಯ ಮತ್ತು ವಿದೇಶ ಸುದ್ದಿ

- ರೇಷನ್ ಕಾರ್ಡ್‌ಗೆ 13 ಲಕ್ಷ ಅರ್ಜಿ 2 ತಿಂಗಳಲ್ಲಿ ಪಡಿತರ ಚೀಟಿ: ಶೋಭಾ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಎಪಿಎಲ್ ಹಾಗೂ ಬಿಪಿಎಲ್ ಕುಟುಂಬಗಳಿಗೆ ಎರಡು ತಿಂಗಳಲ್ಲಿ ಹೊಸ ಕಾರ್ಡ್ ವಿತರಣೆಯಾಗಲಿದೆ. ಪಡಿತರ ಚೀಟಿಗಾಗಿ ಹದಿಮೂರು ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದು, ಜನವರಿ ಮೊದಲ ವಾರ ವಿತರಣೆ ಪ್ರಾರಂಭಗೊಳ್ಳಲಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.
- 'ತಾನೆ' ಚಂಡಮಾರುತ ತಮಿಳುನಾಡಿನ ಕಡಲೂರು ಮತ್ತು ಪಕ್ಕದ ಪುದುಚೇರಿಯಲ್ಲಿ ವ್ಯಾಪಕ ಹಾನಿ ಮಾಡಿದ್ದು, ಅಲ್ಲಿ ಸಾಮಾನ್ಯ ಸ್ಥಿತಿಯನ್ನು ತರಲು ಸಮರೋಪಾದಿಯಲ್ಲಿ ಪರಿಹಾರ ಕಾರ್ಯಾಚರಣೆಗಳು ಆರಂಭಿಸಲಾಗಿದೆ. ಇದೇ ವೇಳೆ ಚಂಡಮಾರುತಕ್ಕೆ ಬಲಿಯಾದವರ ಸಂಖ್ಯೆ 42ಕ್ಕೇರಿದೆ.
- ಆಹಾರ ಹಣದುಬ್ಬರ 6 ವರ್ಷಗಳಷ್ಟು ಅಂದರೆ ಶೇ. 0.42ಕ್ಕೆ ಕುಸಿದಿದೆ. ಡಿಸೆಂಬರ್ 17ಕ್ಕೆ ಅಂತ್ಯವಾದ ವಾರದಲ್ಲಿ ಹಣದುಬ್ಬರ ತೀವ್ರವಾಗಿ ಇಳಿದಿದ್ದು, ಅಗತ್ಯ. ವಸ್ತುಗಳಾದ ತರಕಾರಿ, ಈರುಳ್ಳಿ, ಆಲೂಗಡ್ಡೆ ಮತ್ತು ಗೋಧಿಯ ಬೆಲೆ ತಗ್ಗಿದೆ. ಆಹಾರ ಹಣದುಬ್ಬರವನ್ನು ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧಾರದ ಅಡಿಯಲ್ಲಿ ಅಳೆಯಲಾಗುತ್ತಿದೆ. ಇದಕ್ಕೂ ಹಿಂದಿನ ವಾರ ಆಹಾರ ಹಣದುಬ್ಬರ ಶೇ. 1.81ರಷ್ಟಿತ್ತು.
- 'ಗ್ರೇಟ್ ಮ್ಯಾನ್' ಮುತ್ತಯ್ಯ ಮುರಳೀಧರನ್ ವಿದಾಯದ ಬಳಿಕ ಟೆಸ್ಟ್ ಗೆಲುವನ್ನೇ ಮರೆತಿದ್ದ ಶ್ರೀಲಂಕಾ ಡರ್ಬನ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದೆ. ಮುರಳಿ ನಿವೃತ್ತಿ ಅನಂತರ ಮೊದಲ ಟೆಸ್ಟ್ ಗೆಲುವು ದಾಖಲಿಸಿದೆ. ಇದು ದಕ್ಷಿಣ ಆಫ್ರಿಕಾ ನೆಲದಲ್ಲಿ ಲಂಕಾ ದಾಖಲಿಸಿದ ಪ್ರಪ್ರಥಮ ಟೆಸ್ಟ್ ಗೆಲುವು ಎಂಬುದು ಮತ್ತೊಂದು ವಿಶೇಷ.
- ಸೌರಮಂಡಲ ಹೊರಾವರಣದಲ್ಲಿ ಸೂರ್ಯನ ಮಾದರಿಯ, ನಕ್ಷತ್ರಕ್ಕೆ ಸುತ್ತು ಹಾಕುತ್ತಿರುವ ಎರಡು ಭೂಮಿ ಗಾತ್ರದ ಗ್ರಹಗಳನ್ನು ನಾಸಾದ ಕೆಪ್ಲರ್ ಸಮಿತಿ ಪತ್ತೆಹಚ್ಚಿದೆ. ಭೂಮಿಯನ್ನು ಹೊರತುಪಡಿಸಿ ಇತರ ಗ್ರಹಗಳಲ್ಲಿ ಜೀವಿಗಳ ವಾಸಕ್ಕೆ ಯೋಗ್ಯ ವಾತಾವರಣ ಇದೆಯೇ ಎಂಬುದನ್ನು ಪತ್ತೆಹಚ್ಚುವಲ್ಲಿ ನಿರತವಾಗಿರುವ ವಿಜ್ಞಾನಿಗಳಿಗೆ ಹೊಸದಾಗಿ 2 ಗ್ರಹಗಳು ಪತ್ತೆಯಾಗಿರುವುದು ಮತ್ತಷ್ಟು ಉತ್ತೇಜನ ನೀಡಿದಂತಾಗಿದೆ.
- ಬಡತನ ನಿರ್ಮೂಲನೆಯಿಂದ ಕ್ಷೇತ್ರದಲ್ಲಿ ಭಾರತ ಮತ್ತು ಚೀನಾ ಅಲ್ಪಾವಧಿಯಲ್ಲೇ ಮಾಡಿದ ಸಾಧನೆಯನ್ನು ಪ್ರಶಂಸಿಸಿರುವ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಏಷ್ಯಾದ ಈ ದೈತ್ಯಶಕ್ತಿಗಳು ಭವಿಷ್ಯ ಸಂಭಾವ್ಯ ಗ್ರಾಹಕರು ಎಂದು ಬಣ್ಣಿಸಿದ್ದಾರೆ.

## ಡಿಜಿಎಮ್ ಬೇತೇಲ್ ಅಂಕಣ

- **ಸಹೋ॥ ಗ್ಲಾಡ್ವಿನ್ ಮತ್ತು ಸಹೋ॥ ಸುನೀತಾರವರಿಗೆ ದೇವರು ದಾನವಾಗಿ ಅನುಗ್ರಹಿಸಿದ ಹೆಣ್ಣು ಮಗುವಿಗೆ ಗ್ಲೋರಿಯಾ ಪ್ರೈಜ್ ಪೆಂಗಾಲ್ ಎಂದು ನಾಮಕರಣ ಮಾಡಿ ದೇವರಿಗೆ ಪ್ರತಿಷ್ಠಿಸಲಾಯಿತು.**
- **40 ದಿವಸದ ಪ್ರಾರ್ಥನಾ ಕೂಟವು ದೇವರ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯುತ್ತಿದೆ.**

## ನಗೆ ಹನಿ

ಅಂಕಲ್ : ಗುಂಡ, ನಿನ್ನ ಅಪ್ಪನನ್ನು ಕರೆಯೋ,

ಗುಂಡ : ಇಲ್ಲ ಅಂಕಲ್. ನಮ್ಮಪ್ಪ ಒಳಗಡೆ ಇಲ್ಲ

ಅಂಕಲ್ : ಗುಂಡ, ಮಕ್ಕಳು ಸುಳ್ಳು ಹೇಳಬಾರದು. ನಾನೇ ನೋಡಿರುವೆನು. ನಿಮ್ಮ ಅಪ್ಪ ಒಳಗಡೆ ಇದ್ದಾರೆ. ಕರಿ.

ಗುಂಡ : ಅಪ್ಪಾ, ಅಂಕಲ್ ನೀನು ಒಳಗಡೆ ಇಲ್ಲ ಎಂದು ಹೇಳುತ್ತಿದ್ದರೂ ನಂಬುತ್ತಿಲ್ಲ. ನೀನೇ ಬಂದು ಹೇಳು.

ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು, ಇದು ಸೇನಾಧೀಶ್ವರ ಯೆಹೋವನ ನುಡಿ

(ಹಗ್ಗಾ. 2:9).

**ಚಿಕ್ಕ ಪ್ರವಾದನೆ ಗ್ರಂಥಗಳಲ್ಲಿ ಕೆಲವು ವಾಕ್ಯಗಳನ್ನು ಕೊಟ್ಟಿದೆ ಇದರಲ್ಲಿ ಎಷ್ಟನೇ ಅಧ್ಯಾಯ ಮತ್ತು ಎಷ್ಟನೇ ವಾಕ್ಯವೆಂಬುದನ್ನು ಬರೆಯಿರಿ.**



**ಮಕ್ಕಳ ಸ್ವರ**

1. ನನ್ನ ಜನರು ಎಂದಿಗೂ ಆಶಾಭಂಗಪಡರು (ಯೋವೇಲ).
2. ದ್ರಾಕ್ಷೆಯ ತೋಟಗಳನ್ನು ಮಾಡಿಕೊಂಡು ಅವುಗಳ ದ್ರಾಕ್ಷಾರಸವನ್ನು ಕುಡಿಯುವರು (ಆಮೋಸ).
3. ಯೆಹೋವನ ದಿನವು ಸಮಸ್ತ ಜನಾಂಗಗಳಿಗೆ ಸಮೀಪಿಸಿದೆ; (ಒಬದ್ಯ).
4. ಆದರೂ ನಿನ್ನ ಪರಿಶುದ್ಧಾಲಯವನ್ನು ಪುನಃ ದರ್ಶನಮಾಡುವೆನು (ಯೋನ)
5. ಯೆರುಸಲೇಮಿನಿಂದ ಯೆಹೋವನ ವಾಕ್ಯವು ಹೊರಡುವುದು (ಮೀಕ).
6. ನಿನ್ನ ಹರಕೆಗಳನ್ನು ಸಲ್ಲಿಸು; ಆ ದುಷ್ಟನು ಇನ್ನು ಮುಂದೆ ನಿನ್ನನ್ನು ಹಾದುಹೋಗನು (ನಹೂಮ)
7. ನೀತಿವಂತನು ನಂಬಿಕೆಯಿಂದಲೇ ಬದುಕುವನು (ಹಬಕ್ಕೂಕ)
8. ಕಲ್ಲನ್ನು ನೋಡಿರಿ. ಆ ಒಂದೇ ಕಲ್ಲಿನಲ್ಲಿ 'ಏಳು ಕಣ್ಣುಗಳ್ಳಾತನ ದೃಷ್ಟಿಯು ಬಿದ್ದಿದೆ (ಜೆಕರ್ಯ)
9. ಕರ್ತನಾದ ಯೆಹೋವನ ಸನ್ನಿಧಿಯಲ್ಲಿ ಮೌನವಾಗಿರಿ; ಯೆಹೋವನ ದಿನವು ಸಮೀಪಿಸಿತು (ಜೆಫನ್ಯ)
10. ಮಲೆನಾಡಿಗೆ ಹೋಗಿ ಮರವನ್ನು ತಂದು ನನ್ನ ಆಲಯವನ್ನು ಕಟ್ಟಿರಿ (ಹಗ್ಗಾಯ).
11. ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು (ಮಲಾಕಿ)

---

ವಿಶೇಷ ಸೂಚನೆ : ಪ್ರತಿ ತಿಂಗಳ 15ನೇ ತಾರೀಕಿನ ಒಳಗೆ ನಮ್ಮ ಕೈಗೆ ನಿಮ್ಮ ಉತ್ತರಗಳು ತಲುಪತಕ್ಕದ್ದು.

---

**ಕಳೆದ ಜನವರಿ ತಿಂಗಳ ಸಂಚಿಕೆ ಸರಿಯಾದ ಉತ್ತರಗಳು**
(ಕೀರ್ತನೆ 1ನೇ ಅಧ್ಯಾಯದಿಂದ 10ನೇ ಅಧ್ಯಾಯದವರೆಗೆ)

1. ಲಕ್ಷಿಸುವನು
2. ತಂಗಲಾರದು
3. ನಿನ್ನಲ್ಲಿ ಉಲ್ಲಾಸಗೊಳ್ಳುವುದು
4. ಕೆಡುವುದೇ ಇಲ್ಲ
5. ನೀನೇ ದಿಕ್ಕು
6. ಆಲೋಚಿಸಿಕೊಳ್ಳಿರಿ
7. ಕಾಪಾಡುತ್ತಾನೆ
8. ಉಂಟುಮಾಡಿದ್ದೀ
9. ಮರದಹಾಗಿರುವನು
10. ನೋಡುತ್ತವೆ
11. ನೀವೆಲ್ಲರೂ ನನ್ನಿಂದ ತೊಲಗಿರಿ
12. ನನ್ನನ್ನು ನಡಿಸು
13. ಸಮರ್ಪಿಸಿರಿ
14. ಗುರಾಣಿ
15. ಕಿರೀಟವಾಗಿ ಇಟ್ಟು
16. ನೇರವೇರಿಸುವವನೇ ಆಗಿದ್ದೀ
17. ಕಾಣಿಸುವದೇ ಇಲ್ಲ
18. ಪ್ರಕಾಶಪಡಿಸುತ್ತೀ
19. ಸೇವಿಸಿರಿ
20. ಆವರಿಸಿಕೊಳ್ಳುವುದು

---

**ನಗೆಹನಿ**

ತಾಯಿ : ಸ್ಕೂಲಿನಿಂದ ಈಗ ಬಂದ್ಯಾ ಮರೀ ?
ನೀನು ಮನೆಗೆ ಹೋಗಿ ಮುಖ ತೊಳೆದುಕೊಂಡು ಬಾ ಹೋಗು

ಮಗಳು : ಇವೊತ್ತು ಬಹಳ ಚಳಿಯಮ್ಮಾ. ನೀರು ತುಂಬಾ ತಂಡಿಯಾಗಿರುತ್ತೆ ಮುಖ ತೊಳೆದುಕೊಳ್ಳುವುದಕ್ಕೆ ಬದಲಾಗಿ ನಿನ್ನ ಹಾಗೆ ಮುಖಕ್ಕೆ ಪೌಡರ್ ಹಾಕ್ಕೊಂಡುಬಿಡ್ತೀನಿ, ಸಾಕಲ್ಲವೇ ?

# ಸಿ. ಎಸ್. ಐ. ಬಾಲಕರ ಬೋರ್ಡಿಂಗ್ ಹೋಮ್
# ಹಳೆ ವಿದ್ಯಾರ್ಥಿಗಳ ಸಂಘ

## (Ex –B.E.M. Boy's Orphanage)

ಮಿಷನ್ ಕಂಪೌಂಡ್, ಉಡುಪಿ – 576101

## ಹಳೆ ವಿದ್ಯಾರ್ಥಿಗಳ ಅವಗಾಹನೆಗಾಗಿ

ಮೇಲ್ಕಂಡ ಬೋರ್ಡಿಂಗ್ ಹೋಮ್‌ನಲ್ಲಿ ವಿದ್ಯಾಭ್ಯಾಸ ಮಾಡಿದ ಹಳೆ ವಿದ್ಯಾರ್ಥಿ ಮಿತ್ರರಾದ ನಾವುಗಳು ಒಂದು ಸಂಘಟನೆಯ ಮೂಲಕ ಹಳೆ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ, ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಲು ಒಂದು ಸಂಘವನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ. ಈ ಆಶ್ರಮದಲ್ಲಿ ಈ ಹಿಂದೆ ಬೆಳೆದು ಬಂದ ವಿದ್ಯಾರ್ಥಿಗಳ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆಯ ವಿವರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ವಿನಂತಿಸುತ್ತೇವೆ ಹಾಗೂ ತಮ್ಮೆಲ್ಲರ ಸಂಪೂರ್ಣ ಸಹಕಾರವನ್ನು ಬಯಸುತ್ತೇವೆ.

**ದಿನಾಂಕ 18–03–2011 ಒಂದು ದಿವಸದ ವಿಶೇಷ ಆರಾಧನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

ಸ್ಥಳ: ಉಡುಪಿ

ದಿನಾಂಕ : 20–11–2011

**(ವಾರ್ಡನ್ : 0820–2520679)**

**ಮೊಬೈಲ್ : 9448194894, 9880349668, 9980987999**

ಇ–ಮೈಲ್ : csiemboysorphanageallumni@gmail.com

## ಕವನಗಳು

# ಶುದ್ಧ ಅಶುದ್ಧ

ಪರಿಶುದ್ಧ ಪರಿಶುದ್ಧ ಪರಿಶುದ್ಧ
ಎಲ್ಲೆಲ್ಲೂ ಅಶುದ್ಧ ಎಲ್ಲಿದೆ ಶುದ್ಧ
ನೀವೂ ಆಗಬೇಕೆ ಪರಿಶುದ್ಧ
ಮಾರ್ಗವೊಂದೆ ತಿಳಿಯಬೇಕಿದೆ ಓಪೆದ್ದ
ಅರಿಯಲೇ.... ಬೇಕಿದೆ ಇದು ಬದ್ಧ

ಕಥೆಯೊಂದ ನಾ ಹೇಳುವೆ ಕೇಳಲು ನೀವಿರುವಿರಾ ಸಿದ್ಧ
2000 ವರ್ಷದ ಹಿಂದೆ ಯೇಸು ಇದ್ದ
ಪಾಪಿಗಳ ಹುಡುಕಿ ರಕ್ಷಿಸಲೆಂದು ಅವ ಭುವಿಯಲ್ಲಿ ಎದ್ದ
ನಮ್ಮ ಪಾಪಕ್ಕಾಗಿಯೇ ಸ್ವಂತ ರಕ್ತವ ಸುರಿಸಲು ಅವನಾದ ಸಿದ್ದ
ನಮಗಾಗಿಯೇ ಅವ ಶಿಲುಬೆಯಲ್ಲಿ ಸತ್ತು ಬಿದ್ದ.

ಮತ್ತೆ ಮೂರೇ ದಿನದಲ್ಲಿ ಎದ್ದ ಮರಣವ ಗೆದ್ದ
ಶುದ್ಧತೆಗಾಗಿ ತೇಜಿಸಿರಿ ಲೋಕದಾಸೆಯ ಪರಿ-ಪರಿಯ ಅಶುದ್ಧ
ಲೋಕದಾಸೆಯಿಂದ ಹೊರಬರಲು ನಿಮಗಿರುವುದು ಯುದ್ಧ
ಭಯವೇಕೆ ಯುದ್ಧಕ್ಕೆ ಆಯುಧವು ಸಿದ್ದ.

ಯೇಸುವನ್ನೇ ರಕ್ಷಕನೆಂದು ನಂಬಿ ಹಿಂಬಾಲಿಸಲು
ಅಶುದ್ಧವು -ಶುದ್ಧ -ಪರಿಶುದ್ಧ
ಅದಕ್ಕಾಗಿಯೇ ಸಹಿಸಿಕೊಳ್ಳಲೇ ಬೇಕು ಅವಿಶ್ವಾಸಿಗಳ ಗುದ್ದ
ಅವಮಾನ ಅನುಮಾನ ಸಹಿಸಲು ನಿಮಗೆ ಪರಲೋಕ ಸನ್ಮಾನ
ಅವಮಾನ, ಅನುಮಾನ, ಸನ್ಮಾನ ಹೀಗಾಯಿತು
ಅಶುದ್ಧದಿಂದ-ಶುದ್ಧ, ಶುದ್ಧ, ಶುದ್ಧ.

**– ಕುಸುಮ**
ಬೆಂಗಳೂರು ಬೇತೇಲ್ ಚರ್ಚ್.

---

**ನಗೆಹನಿ**

ಟೀಚರ್ : ಗುಂಡ ನೀನು ನಿಮ್ಮ ತಾಯಿಗೆ 'Mum' ಅಂತ ಕರೆದರೆ ದೊಡ್ಡಮ್ಮ ಮತ್ತು ಚಿಕ್ಕಮ್ಮನಿಗೆ ಏನೆಂದು ಕರೆಯುತ್ತೀಯಾ ?

ಗುಂಡ : ದೊಡ್ಡಮ್ಮನಿಗೆ 'Maximum' ಮತ್ತು ಚಿಕ್ಕಮ್ಮನಿಗೆ 'Minimum'

**********

ಗುಂಡ : ಕಸ್ಟಮರ್‌ಕೇರ್ ಅಲ್ವಾ ?

ಹುಡುಗಿ : ಹೌದು

ಗುಂಡ : ನನ್ನ ಮಗ ಸಿಮ್ ಕಾರ್ಡ್ ನುಂಗಿದ್ದಾನೆ.

ಹುಡುಗಿ : ಅದಕ್ಕೆ ನಾವೇನು ಮಾಡಬೇಕು?

ಗುಂಡ : ಅವನು ಮಾತನಾಡುತ್ತಾ ಇದ್ದಾನೆ. ಹಣ ಕಟ್ಟಾಗುತ್ತಾ ....?

---

ನಾನು ಯೆಹೂದ ವಂಶವನ್ನು ಬಲಗೊಳಿಸಿ ಯೋಸೇಫ ವಂಶವನ್ನು ಉದ್ಧರಿಸುವೆನು
(ಜೆಕ. 10:6).

# ಸಂತೋಷವುಳ್ಳ ಕುಟುಂಬ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಮಹಿಳೆಯರ ಸ್ವರ

**7. ದೇವರ ವಾಕ್ಯ ನಂಬಿಕೆಯನ್ನು ಉಂಟು ಮಾಡುತ್ತದೆ ಹಾಗೂ ನಮ್ಮ ನಂಬಿಕೆಗೆ ಆಧಾರವಾಗಿದೆ :** ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ ಈ ವಾಕ್ಯದಲ್ಲಿ ಎರಡು ಸಂಗತಿಗಳಿವೆ. 1) ಸಾರಿದ ವಾರ್ತೆಯು ನಂಬಿಕೆಗೆ ಆಧಾರ. 2) ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.

1) **ಸಾರಿದ ವಾರ್ತೆಯು ನಂಬಿಕೆಗೆ ಆಧಾರ :** ದೇವರ ವಾಕ್ಯವು ಒಬ್ಬ ವ್ಯಕ್ತಿಯ ಜೀವಿತದಲ್ಲಿ ನಂಬಿಕೆಯನ್ನುಂಟು ಮಾಡುವಂತದ್ದಾಗಿದೆ. ದೇವರ ವಾಕ್ಯಕ್ಕೆ ಶಕ್ತಿಯಿದೆ ನಂಬದ ವ್ಯಕ್ತಿಯ ಹೃದಯದಲ್ಲಿ ಅದು ಬಲವಾಗಿ ಕಾರ್ಯಮಾಡುತ್ತದೆ. ಅ.ಕೃ. 4:4 ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ನಂಬಿದರು ಗಂಡಸರ ಸಂಖ್ಯೆ ಐದು ಸಾವಿರ ತನಕ ಬೆಳೆಯಿತು. ದೇವರ ವಾಕ್ಯವನ್ನು ನೀನು ಇತರರಿಗೆ ಹೇಳುವಾಗ ಅವರು ಕರ್ತನಾದ ಯೇಸುವನ್ನು ತಿಳಿಯುತ್ತಾರೆ ಹಾಗೂ ನಂಬುವದಕ್ಕೆ ಆರಂಭಿಸುತ್ತಾರೆ.

ಒಂದು ದಿವಸ ಒಬ್ಬ ಯೌವನಸ್ಥನು ತನ್ನ ಸಾಕ್ಷಿಯನ್ನು ಹೇಳುತ್ತಿದ್ದನು. ಆತನು ಅನೇಕ ವಿಧವಾದ ದುಶ್ಚಟಗಳಿಗೆ ತನ್ನ ಯೌವನ ಪ್ರಾಯದಲ್ಲೇ ಒಳಗಾಗಿದ್ದನು ಮತ್ತು ಅದರಿಂದ ಹೊರಗೆ ಬರುವ ಬಗ್ಗೆ ಯಾರಾದರೂ ಆತನಿಗೆ ಹೇಳಿದರೆ ಅವನಿಗೆ ತುಂಬಾ ಕೋಪ ಬರುತ್ತಾ ಇತ್ತು. ತಂದೆ ತಾಯಿ ಆತನ ನಿಮಿತ್ತ ನೆಮ್ಮದಿಯನ್ನು ಕಳಕೊಂಡಿದ್ದರು. ಸಭೆಗೆ ಆರಾಧನೆಗೂ ಹೋಗುತ್ತಾ ಇರಲಿಲ್ಲ. ಸಭೆಗೆ ಹೋಗುವಂತಹ ಜನರನ್ನು ಗೇಲಿ ಮಾಡುತ್ತಿದ್ದನು. ಎಷ್ಟೋ ದೇವ ಸೇವಕರು ಈತನಿಗೆ ಬುದ್ಧಿ ಹೇಳಿದರೂ ಕೇಳುತ್ತಿರಲಿಲ್ಲ. ಒಂದು ದಿನ ಈತ ಹಾಗೂ ಈತನ ಸ್ನೇಹಿತರು ಸೇರಿ ಒಂದು ಕಾಡಿನಲ್ಲಿ ಕುಳಿತು ಸಾರಾಯಿ ಕುಡಿಯುತ್ತಿದ್ದರು. ಆ ಕಾಡಿನಿಂದ ಅರ್ಧ ಕಿಲೋಮೀಟರ್ ದೂರವಿರುವ ಒಂದು ಮೈದಾನದಲ್ಲಿ ಸುವಾರ್ತಾ ಕೂಟಗಳು ನಡೆಯುತ್ತಾ ಇದ್ದದ್ದು ಈತನಿಗೂ ಈತನ ಸ್ನೇಹಿತರಿಗೂ ತಿಳಿದಿರಲಿಲ್ಲ. ಪಕ್ಕನೆ ಮೈಕಿನಿಂದ ಪ್ರಾರ್ಥನೆ ಹಾಗೂ ಸ್ತುತಿ ಆರಾಧನೆಯ ಹಾಡುಗಳು ಕೇಳಲಾರಂಭಿಸಿದವು. ಇವರೆಲ್ಲರೂ ಈ ಹಾಡುಗಳನ್ನು ಕೇಳಿ ತಮಾಷೆ ಮಾಡಲಾರಂಭಿಸಿದರು. ಸ್ವಲ್ಪ ಸಮಯದ ನಂತರ ದೇವರ ವಾಕ್ಯ ಕೇಳಲು ಆರಂಭಿಸಿದ ಬೋಧಕರು ತನ್ನ ಪ್ರಸಂಗದ ಮಧ್ಯದಲ್ಲಿ ಒಂದು ಮಾತನ್ನು ಒತ್ತಿ ಹೇಳಿದರು. ನೀನು ಇವತ್ತು ಸತ್ತರೆ ಎಲ್ಲಿ ಹೋಗುತ್ತಿ ದೇವರ ವಾಕ್ಯದಲ್ಲಿ ಮನುಷ್ಯನು ಶರೀರ ಬಿಟ್ಟ ನಂತರ ಸೇರಬೇಕಾದ ಎರಡು ಸ್ಥಳಗಳಲ್ಲಿ ಸೇರುತ್ತಾನೆಂದು ಬರೆಯಲ್ಪಟ್ಟಿದೆ ನರಕ ಹಾಗೂ ಪರಲೋಕಕ್ಕೆ ಹೋಗಲು ನಿನ್ನನ್ನು ಸಿದ್ಧಪಡಿಸುತ್ತಿದ್ದಿಯೋ ಅಥವಾ ನರಕಕ್ಕೆ ಹೋಗಲು ಇಷ್ಟಪಡುತ್ತಿಯೋ ಎಂದು ಬೋಧಿಸಿದರು. ಈ ವಾಕ್ಯ ಈ ಯೌವನಸ್ಥನ ಹೃದಯದಲ್ಲಿ ಪದೇ ಪದೇ ಪ್ರತಿ ಧ್ವನಿಸಲಾರಂಭಿಸಿತು. ಆತನ ಎಲ್ಲಾ ನಗೆ ಇಳಿದು ಹೋಯಿತು, ಭಯ ಆತನಲ್ಲಿ ಉಂಟಾಯಿತು. ರಾತ್ರಿಯಲ್ಲಿ ನಿದ್ರೆ ಬರಲಿಲ್ಲ. ಮುಂಜಾನೆ ಎದ್ದು ಎಲ್ಲಾ ಸ್ಥಳಗಳಲ್ಲಿ ತಿರುಗಾಡಿದನು ಸಿಕ್ಕಿದ ಬಸ್ಸಗಳಲ್ಲಿ ಅಲೆದಾಡಿದನು ಮನಸ್ಸಿಗೆ ಸಮಾಧಾನ ಇಲ್ಲಾ. ಮತ್ತೆ ಅದೇ ವಚನ ಹೃದಯದಲ್ಲಿ ಪ್ರತಿಧ್ವನಿಸುತ್ತಾ ಇದೆ. ನಾನು ಇಂದು ಸತ್ತರೆ ಎಲ್ಲಿ ಹೋಗುತ್ತೆ ಒಂದು ಸಲ ಆತ್ಮಹತ್ಯೆ ಮಾಡಿಕೊಂಡು ಸಾಯೋಣ ಎಂದು ತೀರ್ಮಾನಿಸಿದ ನರಕದ ಭಯ ಇದ್ದದ್ದರಿಂದ ಆ ಕಾರ್ಯಕ್ಕೆ ಹೋಗಲಿಲ್ಲ. ಆಗ ಒಬ್ಬ ದೇವ ಸೇವಕರು ಒಂದು ಬೀದಿಯಲ್ಲಿ ನಿಂತು ಕರಪತ್ರಗಳನ್ನು ಹಂಚುತ್ತಿದ್ದರು. ಈತನು ಅವರ ಬಳಿ ಹೋಗಿ ಕರಪತ್ರ ಕೇಳಿದ ದೇವ ಸೇವಕರು ಆತನಿಗೆ ಕರಪತ್ರ ಕೊಟ್ಟರು. ಅದರ ತಲೆ ಬರಹ ಓದಿದಾಗ ಈ ಯೌವನಸ್ಥನಿಗೆ ಆಶ್ಚರ್ಯ ನಿನ್ನ ಮರಣಕ್ಕೆ ಸಿದ್ಧಪಡಿಸಿದ್ದೀಯೋ ಎಂದು ಕೊನೆಗೆ ಈ ಯೌವನಸ್ಥನು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ದೇವ ಸೇವಕರ ಬಳಿ ತನಗೋಸ್ಕರ ಪ್ರಾರ್ಥಿಸಲು ಕೇಳಿಕೊಂಡನು. ದೇವ ಸೇವಕರು ಈತನಿಗೆ ಸ್ವಲ್ಪ ಹೊತ್ತು ದೇವರ ವಾಕ್ಯ ಬೋಧಿಸಿ ಈತನಿಗಾಗಿ ಪ್ರಾರ್ಥಿಸಿದರು. ಇವತ್ತು ಈ ಸಹೋದರನು ರಕ್ಷಣೆ ಹೊಂದಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡು ಒಂದು ಸಭೆಯಲ್ಲಿದ್ದಾನೆ. ಮಾತ್ರವಲ್ಲ, ಕರ್ತನು ಆತನನ್ನು ಯೌವನಸ್ಥರ ಮಧ್ಯದಲ್ಲಿ ಬಲವಾಗಿ ಉಪಯೋಗಿಸುತ್ತಿದ್ದಾನೆ. ಅ.ಕೃ. 4:4 ಈ ವಾಕ್ಯವನ್ನು ಪುನ: ನಾವು ನೆನಪು ಮಾಡುವುದಾದರೆ ವಾಕ್ಯವನ್ನು ಕೇಳಿ ನಂಬಿದ ಜನರ ಸಂಖ್ಯೆ ಬೆಳವಣಿಗೆಯಾದುದ್ದನ್ನು ಕಾಣಬಹುದು.

ನಿಮ್ಮನ್ನು ಲೋಕದ ಸಕಲ ಜನಾಂಗಗಳಲ್ಲಿ ಕೀರ್ತಿಸ್ತೋತ್ರಗಳಿಗೆ ಗುರಿಮಾಡುವೆನು (ಹಗ್ಗಾ. 3:20).

**2) ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮ. 10:17):** ಅನೇಕರು ಅನೇಕ ವಿಧವಾದ ಪ್ರಸಂಗಗಳನ್ನು ಮಾಡುತ್ತಾರೆ. ಆದರೆ ಸ್ವಲ್ಪ ಕೂಡ ದೇವರ ವಾಕ್ಯದ ಆಧಾರ ಇರುವುದಿಲ್ಲ. ಯಾರೇ ಆಗಲಿ ಸಾರುವಂಥ ಸುವಾರ್ತೆ ಬೋಧಿಸುವಂಥ ಬೋಧನೆಗೆ ಆಧಾರ ಇರಬೇಕು ಅದು ಸತ್ಯವೇದವೇ ಆಗಿದೆ. ಸತ್ಯವೇದದ ಅದರ ಎಲ್ಲಿದೆ? ಮಾಡುವಂಥ ಪ್ರಸಂಗ ಉಪದೇಶ, ಬೋಧನೆ ಯಾವುದು ಉಪಯೋಗಕ್ಕೆ ಇಲ್ಲದ್ದಾಗಿದೆ.

**1) ದೇವರ ವಾಕ್ಯ ಬಿಡುಗಡೆ ಮಾಡುತ್ತದೆ** (ಯೋಹಾ. 8:32): ಯೋಹಾ. 17:17 ರಲ್ಲಿ ಕರ್ತನಾದ ಯೇಸುಕ್ರಿಸ್ತನೇ ಹೇಳಿದ್ದಾನೆ, ದೇವರ ವಾಕ್ಯವೇ ಸತ್ಯವೆಂದು ನಮ್ಮ ಜೀವಿತದಲ್ಲಿ ನಾವು ಅನುಸರಿಸುವಂಥ, ಆಚರಿಸುವಂತಹ, ಆರಾಧಿಸುವಂತಹ, ನಂಬುವಂತಹ, ಹಿಂಬಾಲಿಸುವಂತಹ, ಅನೇಕ ದೇವರ ವಾಕ್ಯಕ್ಕೆ ವಿರುದ್ಧವಾದ ಸಂಗತಿಗಳಿವೆ. ದೇವರ ವಾಕ್ಯವನ್ನು ಓದಿ, ಧ್ಯಾನಿಸಿ ಕೇಳಿದಾಗ ನಾವು ನಿಜವಾದ ಸತ್ಯವನ್ನು ತಿಳಿದುಕೊಳ್ಳುತ್ತೇವೆ. ಆಗ ವಾಕ್ಯವೆಂಬ ಸತ್ಯವು ಯಾವುದು? ಸತ್ಯ ಯಾವುದು? ಸುಳ್ಳು ಎಂದು ನಮಗೆ ತಿಳಿಸುವುದರಿಂದ ಸುಳ್ಳಾದ ಸಂಗತಿಗಳನ್ನು ಬಿಟ್ಟು ಬಿಡುತ್ತೇವೆ. ಇದು ದೇವರ ವಾಕ್ಯದ ಕಾರ್ಯವಾಗಿದೆ.

**2) ದೇವರ ವಾಕ್ಯವು ಆರೋಗ್ಯವನ್ನುಂಟು ಮಾಡುತ್ತದೆ** (ಕೀರ್ತ. 107:20): ದೇವರ ವಾಕ್ಯ 4 ವಿಧವಾಗಿ ಸೌಖ್ಯ ಕೊಡುತ್ತದೆ.

ಎ) ವಾಕ್ಯ ಹೇಳುವಾಗ (ಅರಿಕೆ ಮಾಡುವಾಗ) (ಜ್ಞಾನೋ. 4:20–24).

ಬಿ) ವಾಕ್ಯದ ಆಧಾರದಲ್ಲಿ ಪ್ರಾರ್ಥಿಸುವಾಗ (1 ಪೇತ್ರ. 2:24–25).

ಸಿ) ವಾಕ್ಯ ನಂಬುವಾಗ (1 ಥೆಸ. 2:13).

ಡಿ) ವಾಕ್ಯ ಕೇಳುವಾಗ (ಅ.ಕೃ. 3:1–16).

ನನ್ನ ಪತಿಯವರು ಕ್ರಿ.ಶ. 97 ರಲ್ಲಿ ಬಹರೈನ್‌ನಲ್ಲಿದ್ದಾಗ ಒಂದು ಘಟನೆ ನಡೆಯಿತು. ಅವರು ಒಂದು ಮನೆಯಲ್ಲಿ ಪ್ರಾರ್ಥಿಸಿ ಆರಾಧಿಸಿದ ನಂತರ ದೇವರ ವಾಕ್ಯದ ಸಂದೇಶವನ್ನು ಕೊಡುತ್ತಿದ್ದರು. ಆಗ ಒಬ್ಬ ವ್ಯಕ್ತಿ ಕುಂಟುತ್ತಾ ಒಳಗೆ ಬರುವುದನ್ನು ಅವರು ಕಂಡರು. ಆ ವ್ಯಕ್ತಿ ಮೂಲತ: ಕೇರಳದವರು. ವಾಕ್ಯದ ಸಂದೇಶದ ನಂತರ ನನ್ನ ಪತಿ ಪಾಸ್ಟರ್ ಸುನಿಲ್ ಆ ವ್ಯಕ್ತಿಗೆ ಕೇಳಿದರು ನೀವು ಕುಂಟುತ್ತಾ ಬಂದದ್ದನ್ನು ನಾನು ನೋಡಿದೆ ನಿಮಗಾಗಿ ನಾನು ಪ್ರಾರ್ಥಿಸಬೇಕೋ ? ಆಗ ಆ ಸಹೋದರ ಪಾಸ್ಟರ್ ನನಗಾಗಿ ನೀವು ಪ್ರಾರ್ಥಿಸುವ ಅವಶ್ಯಕತೆ ಇಲ್ಲ ನೀವು ಕೊಟ್ಟ ದೇವರ ವಾಕ್ಯ ಅದು ನನ್ನ ಜೀವಿತದಲ್ಲಿ ನಡೆಯುವ ಎಲ್ಲಾ ಸಂಭವಗಳಾಗಿತ್ತು. ಆಗಲೇ ನಾನು ಮಾನಸಾಂತರ ಪಟ್ಟು ಕರ್ತನಾದ ಯೇಸುಕ್ರಿಸ್ತನಲ್ಲಿ ಕ್ಷಮೆಯಾಚಿಸಿದೆ. ನಂತರ ಪುನ: ದೇವರ ವಾಕ್ಯ ಕೇಳುವಾಗ ನನ್ನ ಕಾಲಲ್ಲಿದ್ದ ನೋವೆಲ್ಲಬಿಟ್ಟು ಹೋಯಿತು ಕಾಲಲ್ಲಿದ್ದ ಊದುವಿಕೆಯೂ ಬಿಟ್ಟು ಹೋಯಿತು. ನಾನೀಗ ಸಾಮಾನ್ಯವಾಗಿ ನಡೆಯ ಬಲ್ಲೆ ಎಂದು ಲಾಗ ಹಾಕಿ ತೋರಿಸಿದರು. ಆತನನ್ನು ಸ್ವಸ್ಥಪಡಿಸಿದ ದೇವರ ವಾಕ್ಯಕ್ಕಾಗಿ ದೇವರಿಗೆ ಸ್ತೋತ್ರ.

ಮುಂದುವರಿಯುವದು......

ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ

**ಸಹೋ॥ ಎಲಿಜಬೆತ್ ಸುನಿಲ್ ಜಾನ್ ಡಿ'ಸೋಜಾ.**

## ಪ್ರಾರ್ಥನಾ ಮನವಿಗಳು

- **ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿರುವ ಪ್ರತಿಯೊಂದು ಅಧಿಕಾರಿಗಳಿಗಾಗಿ ಪ್ರಾರ್ಥಿಸೋಣ (1 ತಿಮೊ. 2:2).**
- **ಬಾಲ್ಯವಿವಾಹ ಪದ್ಧತಿ ನಿರ್ಮಾಲನೆಯಾಗುವಂತೆ ಪ್ರಾರ್ಥಿಸೋಣ.**
- **ಈ ವರ್ಷದಲ್ಲಿ ಕರ್ತನು ನಮ್ಮ ದೇಶವನ್ನು ಸಂರಕ್ಷಿಸಿ ಕಾಯ್ದು ಕಾಪಾಡುವಂತೆ ಪ್ರಾರ್ಥಿಸೋಣ (ಯೆಶಾ. 60:18).**
- **ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸೋಣ.**
- **ದೇವರ ಸೇವಕರಿಗೆ ಮತ್ತು ದೇವ ಜನರಿಗೆ ಕರ್ತನು ವಿಶೇಷ ರಕ್ಷಣೆಯನ್ನು ಕೊಡುವಂತೆ ಪ್ರಾರ್ಥಿಸೋಣ.**
- **ಭಯೋತ್ಪಾದನೆ, ಭ್ರಷ್ಟಾಚಾರ, ಮೋಸವಂಚನೆ ನಿರ್ಮೂಲನೆಯಾಗುವಂತೆ ಪ್ರಾರ್ಥಿಸೋಣ.**
- **ಭಾರತದಲ್ಲಿ ತಲೆದೋರಿರುವ ಬಡತನ, ದಾರಿದ್ರ್ಯ, ನಿರುದ್ಯೋಗ ಸಮಸ್ಯೆಯನ್ನು ದೇವರು ನೀಗಿಸುವಂತೆ ಪ್ರಾರ್ಥಿಸೋಣ.**

ಬಹು ಜನಾಂಗಗಳು ಯೆಹೋವನಾದ ನನ್ನನ್ನು ಆಶ್ರಯಿಸಿಕೊಂಡು ನನ್ನ ಜನವಾಗುವವು;
ನಾನು ನಿನ್ನ ಮಧ್ಯದಲ್ಲಿ ವಾಸಿಸುವೆನು (ಜೆಕ. 2:11).